COURT BOOK
EMPOWERING LEGAL CLARITY

# 2005ರ ಕರ್ನಾಟಕ ಅಧಿನಿಯಮ ಸಂಖ್ಯೆ 30

## ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ಅಧಿನಿಯಮ, 2004

### ಪ್ರಕರಣಗಳ ಪಟ್ಟಿ

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು:**


ಅಧ್ಯಾಯ – I

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು

ಅಧ್ಯಾಯ – II

3. ಠೇವಣಿಗಳನ್ನು ಹಿಂದಿರುಗಿಸಲು ತಪ್ಪಿದಲ್ಲಿ ಸ್ವತ್ತುಗಳ ಜಪ್ತಿ
4. ಆವರಣಗಳನ್ನು ಪ್ರವೇಶಿಸಲು ಮತ್ತು ಕೆಲವೊಂದು ದಸ್ತಾವೇಜುಗಳನ್ನು ತಪಾಸಣೆ ಮಾಡಲು ಅಧಿಕಾರ
5. ಸಕ್ಷಮ ಪ್ರಾಧಿಕಾರಿ
6. ಸಕ್ಷಮ ಪ್ರಾಧಿಕಾರಿಯ ಕರ್ತವ್ಯಗಳು ಮತ್ತು ಅಧಿಕಾರಗಳು
7. ಸ್ವತ್ತುಗಳ ಮತ್ತು ಠೇವಣಿಗಳ ಹೊಣೆಗಳ ನಿರ್ಧರಣೆ
8. ಸಕ್ಷಮ ಪ್ರಾಧಿಕಾರಿಯಿಂದ ವರದಿ

ಅಧ್ಯಾಯ – III

9. ಹಣಕಾಸು ಸಂಸ್ಥೆಯಿಂದ ವಂಚನೋದ್ದೇಶದ ತಪ್ಪುವಿಕೆ

ಅಧ್ಯಾಯ – IV

10. ವಿಶೇಷ ನ್ಯಾಯಾಲಯ
11. ಸ್ವತ್ತುಗಳ ನಗದು ಪರಿವರ್ತನೆ ಮತ್ತು ಠೇವಣಿದಾರರಿಗೆ ಸಂದಾಯಕ್ಕೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಲಯದ ಅಧಿಕಾರಗಳು
12. ಜಪ್ತಿಗೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಲಯದ ಅಧಿಕಾರಗಳು
13. ದುರ್ಭಾವನೆಯಿಂದ ಮಾಡಿದ ವರ್ಗಾವಣೆವನ್ನು ಪಡೆದವನ ಸ್ವತ್ತಿನ ಜಪ್ತಿ
14. ಜಪ್ತಿಗೆ ಬದಲಾಗಿ ಭದ್ರತೆ
15. ಜಪ್ತಿ ಮಾಡಿದ ಸ್ವತ್ತಿನ ನಿರ್ವಹಣೆ
16. ಅಪೀಲು
17. ವಿಶೇಷ ಸರ್ಕಾರಿ ಅಭಿಯೋಜಕ
18. ಅಪರಾಧಗಳಿಗೆ ಸಂಬಂಧಪಟ್ಟಂತೆ ವಿಶೇಷ ನ್ಯಾಯಾಲಯದ ಕಾರ್ಯವಿಧಾನ ಮತ್ತು ಅಧಿಕಾರಗಳು

ಅಧ್ಯಾಯ – V

19. ಅಧಿನಿಯಮವು ಇತರ ಕಾನೂನುಗಳಿಗಿಂತ ಹೆಚ್ಚು ಪ್ರಭಾವವುಳ್ಳದ್ದಾಗಿರುವುದು
20. ಸದ್ಭಾವನೆಯಿಂದ ಕೈಕೊಂಡ ಕ್ರಮದ ರಕ್ಷಣೆ
21. ನಿಯಮಗಳ ರಚನಾಧಿಕಾರ
22. ತೊಂದರೆಗಳನ್ನು ನಿವಾರಿಸಲು ಅಧಿಕಾರ


## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಭಾರತದ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934ರ ಕೇಂದ್ರ ಅಧಿನಿಯಮ II) ವ್ಯಾಪ್ತಿಗೆ ಒಳಪಡದಂಥ, ಹಣಕಾಸು ಸಂಸ್ಥೆಗಳು ರಾಜ್ಯದಲ್ಲಿ ತ್ವರಿತ ಗತಿಯಿಂದ ಬೆಳೆಯುತ್ತಿವೆ. ಹೆಚ್ಚಿನ ದರದ ಬಡ್ಡಿ ನೀಡುತ್ತೇವೆ ಮತ್ತು ಸುಲಭದ ಗಳಿಕೆ ದೊರೆಯುತ್ತದೆ ಎಂಬ ಆಶ್ವಾಸನೆ ನೀಡಿ ಹೆಚ್ಚಾಗಿ ಮಧ್ಯಮ ವರ್ಗ ಮತ್ತು ಬಡವರ್ಗದ ಸಾರ್ವಜನಿಕರಿಂದ ಈ ಹಣಕಾಸು

ಸಂಸ್ಥೆಗಳು ಠೇವಣಿ ರೂಪದಲ್ಲಿ ಹಣ ಪಡೆಯುತ್ತಿವೆ. ಇಂಥ ಅನೇಕ ಹಣಕಾಸು ಸಂಸ್ಥೆಗಳು ಅವಧಿ ಮುಕ್ತಾಯದ ತರುವಾಯ ಸಾರ್ವಜನಿಕರಿಗೆ ಹಣ ಹಿಂತಿರುಗಿಸಲು ತಪ್ಪಿ, ಠೇವಣಿದಾರರಿಗೆ ನ್ಯಾಯವಾಗಿ ಬರಬೇಕಾದಂಥ ಹಣವನ್ನು ನೀಡದೆ ಮೋಸ ಮಾಡಿವೆ. ಠೇವಣಿದಾರರ ಹಿತಾಸಕ್ತಿಗಳನ್ನು ರಕ್ಷಿಸುವಂತಹ ಒಂದು ಕಾನೂನು ವ್ಯವಸ್ಥೆ ಬೇಕೆಂದು ಠೇವಣಿದಾರರ ಸಂಘಗಳು ಮತ್ತು ಸಾರ್ವಜನಿಕರು ಸರ್ಕಾರಕ್ಕೆ ಅನೇಕ ಮನವಿಗಳನ್ನು ಸಲ್ಲಿಸಿರುತ್ತಾರೆ. ಭಾರತದ ರಿಸರ್ವ್ ಬ್ಯಾಂಕ್ ಸಹ ಠೇವಣಿದಾರರ ಹಿತಾಸಕ್ತಿಯನ್ನು ರಕ್ಷಿಸಲು ರಾಜ್ಯ ಸರ್ಕಾರ ಒಂದು ಕಾನೂನನ್ನು ರಚಿಸಬೇಕೆಂದು ಸಲಹೆ ನೀಡಿದೆ. ಆದ್ದರಿಂದ ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ ವ್ಯಾಪ್ತಿಯಲ್ಲಿ ಬರುವ ಸಂಸ್ಥೆಗಳಲ್ಲದ, ಅಂಥ ಇತರ ಹಣಕಾಸು ಸಂಸ್ಥೆಗಳ ಚಟುವಟಿಕೆಗಳನ್ನು ನಿಯಂತ್ರಿಸಲು ಒಂದು ಸೂಕ್ತ ಶಾಸನವನ್ನು ಜಾರಿಗೆ ತರುವುದು ಅವಶ್ಯ ಎಂದು ಪರಿಗಣಿಸಲಾಗಿದೆ.

ಇದಕ್ಕನುಸಾರವಾಗಿ, ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ವಿಧೇಯಕ, 2000 (2000ದ ವಿಧಾನ ಸಭೆಯ ವಿಧೇಯಕ ಸಂಖ್ಯೆ 36) ವನ್ನು ರಾಜ್ಯ ವಿಧಾನ ಮಂಡಲದಲ್ಲಿ ಮಂಡಿಸಲಾಯಿತು ಮತ್ತು ಎರಡೂ ಸದನಗಳು ಅದನ್ನು ಅನುಮೋದಿಸಿದವು. ಸದರಿ ವಿಧೇಯಕವನ್ನು ರಾಷ್ಟ್ರಪತಿಯವರ ಅನುಮತಿಯನ್ನು ಪಡೆಯುವುದಕ್ಕಾಗಿ ಭಾರತ ಸರ್ಕಾರಕ್ಕೆ ಕಳುಹಿಸಲಾಯಿತು. ಆದಾಗ್ಯೂ, ಈಗಾಗಲೇ ರಾಜ್ಯ ವಿಧಾನ ಮಂಡಲದಿಂದ ಈ ವಿಧೇಯಕವನ್ನು ಅನುಮೋದಿಸಲಾಗಿರುವುದರಿಂದ ಹಣಕಾಸು ಕಂಪನಿ ವ್ಯವಹಾರಗಳ (ಬ್ಯಾಂಕಿಂಗ್ ವಿಭಾಗ) ಮಂತ್ರಾಲಯವು ಸಲಹೆ ನೀಡಿದಂಥ ತಿದ್ದುಪಡಿಗಳನ್ನು ಅಳವಡಿಸಲಾಗಿಲ್ಲ ಎಂದು ಆ ವಿಧೇಯಕಕ್ಕೆ ತಮ್ಮ ಅನುಮೋದನೆ ನೀಡದೆ ಭಾರತದ ರಾಷ್ಟ್ರಪತಿಯವರು ತಡೆಹಿಡಿದಿದ್ದರು.

ಈ ವಿಧೇಯಕವು ಇತರ ವಿಷಯಗಳೊಂದಿಗೆ ಈ ಮುಂದಿನವುಗಳ ಬಗ್ಗೆ ಉಪಬಂಧ ಕಲ್ಪಿಸುತ್ತದೆ, ಎಂದರೆ:–

(i) "ತಪ್ಪುವಿಕೆ" ಎಂಬ ಪದವನ್ನು ವಾಗ್ದಾನ ಮಾಡಿದಂತೆ ಠೇವಣಿಯನ್ನು ಹಿಂದಿರುಗಿಸಲು ಅಥವಾ ಬಡ್ಡಿ, ಬೋನಸ್ ಮತ್ತು ಲಾಭವನ್ನು ಸಂದಾಯ ಮಾಡಲು ಅಥವಾ ಭರವಸೆ ನೀಡಿದ್ದ ಸೇವೆಯನ್ನು ನೆರವೇರಿಸಲು ವಂಚನೆಯ ಉದ್ದೇಶದಿಂದ ತಪ್ಪುವುದೂ ಸೇರುವಂತೆ ಪರಿಭಾಷಿಸಲಾಗಿದೆ;

(ii) ಠೇವಣಿ ಹಿಂತಿರುಗಿಸಲು ತಪ್ಪಿದ ಸಂದರ್ಭದಲ್ಲಿ ಹಣಕಾಸು ಸಂಸ್ಥೆಯ ಮತ್ತು ಹಣಕಾಸು ಸಂಸ್ಥೆಯ ಪ್ರವರ್ತಕನ, ನಿರ್ದೇಶಕನ, ಪಾಲುದಾರನ, ವ್ಯವಸ್ಥಾಪಕನ ಅಥವಾ ಸದಸ್ಯನ ಸ್ವತ್ತನ್ನು ಜಪ್ತಿ ಮಾಡುವುದು;

(iii) ಹಣಕಾಸು ಸಂಸ್ಥೆಯು ಸದ್ಭಾವನೆಯಿಂದಲ್ಲದೆ ಮತ್ತು ಒಂದು ಪ್ರತಿಫಲಕ್ಕಾಗಿ ಅಲ್ಲದೆ ಸ್ವತ್ತನ್ನು ವರ್ಗಾಯಿಸಿದಾಗ ದುರುದ್ದೇಶದಿಂದ ವರ್ಗಾವಣೆ ಪಡೆದಿರುವವರ ಸ್ವತ್ತನ್ನು ಜಪ್ತಿ ಮಾಡುವುದು;

(iv) ಸದರಿ ಸ್ವತ್ತುಗಳ ಮೇಲೆ ನಿಯಂತ್ರಣವನ್ನು ಚಲಾಯಿಸಲು ಸಕ್ಷಮ ಪ್ರಾಧಿಕಾರಿಯ ನೇಮಕ ಹಾಗೂ ಸಕ್ಷಮ ಪ್ರಾಧಿಕಾರಿಯ ಅಧಿಕಾರಗಳು ಮತ್ತು ಕರ್ತವ್ಯಗಳು;

(v) ಎಲ್ಲಾ ಮೊಕದ್ದಮೆಗಳ ಬಗ್ಗೆ ವ್ಯವಹರಿಸಲು ವಿಶೇಷ ನ್ಯಾಯಾಲಯದ ರಚನೆ;

(vi) ಈ ಕಾನೂನಿನ ಉಪಬಂಧಗಳ ಉಲ್ಲಂಘನೆಯು ಹತ್ತು ವರ್ಷಗಳ ಕಾರಾವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಳ ಜುಲ್ಮಾನೆಯಿಂದ ದಂಡನೀಯವಾಗಿದ್ದು ಸದರಿ ಕಾನೂನುಗಳ ಉಪಬಂಧಗಳ ಉಲ್ಲಂಘನೆಗಾಗಿ ಪ್ರವರ್ತಕನ, ಪಾಲುದಾರನ, ನಿರ್ದೇಶಕನ, ವ್ಯವಸ್ಥಾಪಕನ ಅಥವಾ ಆ ಹಣಕಾಸು ಸಂಸ್ಥೆಯ ಆಡಳಿತ ನಿರ್ವಹಣೆಗೆ ಜವಾಬ್ದಾರನಾಗಿದ್ದ ಯಾರೇ ಇತರ ವ್ಯಕ್ತಿಯ ವಿರುದ್ಧ ಕ್ರಿಮಿನಲ್ ವ್ಯವಹರಣೆಗಳನ್ನು ಹೂಡುವುದು.

ಇತರ ಕೆಲವು ಆನುಷಂಗಿಕವಾದ ಮತ್ತು ಪ್ರಾಸಂಗಿಕವಾದ ಉಪಬಂಧಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(2004ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 2)

(ಭಾರತ ಸಂವಿಧಾನದ ಏಳನೇ ಅನುಸೂಚಿಯ 2ನೇ ಪಟ್ಟಿಯ ನಮೂದು 64 ಮತ್ತು 65, 3ನೇ ಪಟ್ಟಿಯ ನಮೂದು 2, 11ಎ, 13 ಮತ್ತು 46)

## 2005ರ ಕರ್ನಾಟಕ ಅಧಿನಿಯಮ ಸಂಖ್ಯೆ 30

(2005ರ ಡಿಸೆಂಬರ್ ಇಪ್ಪತ್ತೆರಡನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

COURT BOOK
EMPOWERING LEGAL CLARITY

# ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ಅಧಿನಿಯಮ, 2004

(2005ರ ಡಿಸೆಂಬರ್ ಹದಿನಾಲ್ಕನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರ ಅನುಮತಿಯನ್ನು ಪಡೆಯಲಾಗಿದೆ)

ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆಗಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ಇತರ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆಗಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಮತ್ತು ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಐವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:

## ಅಧ್ಯಾಯ - I

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ಅಧಿನಿಯಮ, 2004 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

ಈ ಅಧಿನಿಯಮವು, ಅಧಿಸೂಚನೆ ಸಂಖ್ಯೆ:ಆಇ 44 ಟಿಎಆರ್ 2006, ದಿನಾಂಕ:17.05.2006ರ ಮೂಲಕ ದಿ:17ನೇ ಮೇ 2006ರಿಂದ ಜಾರಿಗೆ ಬಂದಿರುತ್ತದೆ. (ಅಧಿಸೂಚನೆಯನ್ನು ಅಧಿನಿಯಮದ ಕೊನೆಯಲ್ಲಿ ನೋಡಬಹುದು.)

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,

(1) "ಸಕ್ಷಮ ಪ್ರಾಧಿಕಾರಿ" ಎಂದರೆ, 5ನೇ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಪ್ರಾಧಿಕಾರಿ;

(2) "ಠೇವಣಿ" ಎಂಬುದು ಯಾವುದೇ ಹಣಕಾಸು ಸಂಸ್ಥೆಯಿಂದ, ನಿಗದಿತ ಅವಧಿಯ ತರುವಾಯ ಅಥವಾ ಅನ್ಯಥಾ, ಬಡ್ಡಿ, ಬೋನಸ್ಸು, ಲಾಭ ಅಥವಾ ಇತರ ಯಾವುದೇ ಪ್ರಯೋಜನದಿಂದ ಕೂಡಿರಲಿ ಅಥವಾ ಇಲ್ಲದಿರಲಿ, ನಗದಾಗಿ ಅಥವಾ ವಸ್ತುರೂಪದಲ್ಲಿ ಅಥವಾ ನಿರ್ದಿಷ್ಟಪಡಿಸಿದ ಸೇವೆಯ ರೂಪದಲ್ಲಿ ಹಿಂದಿರುಗಿಸಬೇಕಾದ ಹಣದ ಯಾವುದೇ ಸ್ವೀಕೃತಿಯನ್ನು ಅಥವಾ ಯಾವುದೇ ಬೆಲೆಬಾಳುವ ವಸ್ತುವಿನ ಸ್ವೀಕಾರವನ್ನು ಒಳಗೊಳ್ಳುತ್ತದೆ ಮತ್ತು ಯಾವಾಗಲೂ ಒಳಗೊಂಡಿರುವುದಾಗಿ ಭಾವಿಸತಕ್ಕದ್ದು, ಆದರೆ ಅದು ಈ ಮುಂದಿನವುಗಳನ್ನು ಒಳಗೊಳ್ಳುವುದಿಲ್ಲ, ಎಂದರೆ,

(i) ಷೇರು ಬಂಡವಾಳದ ಮೂಲಕ ಅಥವಾ ಡಿಬೆಂಚರು, ಬಾಂಡ್ ಮೂಲಕ ಅಥವಾ ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಲಿ ಅಧಿನಿಯಮ, 1992ರ ಅಡಿಯಲ್ಲಿ ಸ್ಥಾಪನೆಯಾದ ಭಾರತೀಯ ಭದ್ರತೆಗಳ ಮಂಡಲಿಯು ನೀಡಿರುವ ಮಾರ್ಗದರ್ಶಿಸೂತ್ರಗಳ ಮತ್ತು ರಚಿಸಿದ ವಿನಿಮಯಗಳ ವ್ಯಾಪ್ತಿಗೆ ಒಳಪಟ್ಟ ಇತರ ಯಾವುದೇ ಲಿಖಿತ ಪತ್ರದ ಮೂಲಕ ಸಂಗ್ರಹಿಸಲಾದ ಮೊಬಲಗು;

(ii) ಒಂದು ಫರ್ಮಿನ ಪಾಲುದಾರರು ಬಂಡವಾಳವಾಗಿ ನೀಡಿದ ಮೊಬಲಗು;

(iii) ಒಂದು ಅನುಸೂಚಿತ ಬ್ಯಾಂಕಿನಿಂದ ಅಥವಾ ಒಂದು ಸಹಕಾರಿ ಬ್ಯಾಂಕಿನಿಂದ ಅಥವಾ ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ (1949ರ ಕೇಂದ್ರ ಅಧಿನಿಯಮ 15) 5ನೇ ಪ್ರಕರಣದ (ಸಿ) ಖಂಡದಲ್ಲಿ ಪರಿಭಾಷಿಸಲಾದ ಇತರ ಯಾವುದೇ ಬ್ಯಾಂಕಿಂಗ್ ಸಂಸ್ಥೆಯಿಂದ ಸ್ವೀಕರಿಸಲಾದ ಮೊಬಲಗು;

(iv) ಈ ಮುಂದಿನವುಗಳಿಂದ ಸ್ವೀಕರಿಸಲಾದ ಯಾವುದೇ ಮೊಬಲಗು,

(ಎ) ಭಾರತೀಯ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್,

(ಬಿ) ಒಂದು ರಾಜ್ಯ ಹಣಕಾಸು ನಿಗಮ,

(ಸಿ) ಕಂಪನಿಗಳ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 1) 4ಎ ಪ್ರಕರಣದಲ್ಲಿ ಅಥವಾ ಅದರ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಹಣಕಾಸು ಸಂಸ್ಥೆ; ಅಥವಾ

COURT BOOK
EMPOWERING LEGAL CLARITY

(ಡಿ) ಈ ಸಂಬಂಧದಲ್ಲಿ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ಇತರ ಯಾವುದೇ ಸಂಸ್ಥೆ;

(v) ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ಈ ಮುಂದಿನವುಗಳ ರೂಪದಲ್ಲಿ ಸ್ವೀಕರಿಸಲಾದ ಮೊಬಲಗುಗಳು,

(ಎ) ಭದ್ರತಾ ಠೇವಣಿ

(ಬಿ) ವ್ಯಾಪಾರಿ ಠೇವಣಿ

(ಸಿ) ಸಂಚಕಾರ ಹಣ

(ಡಿ) ಸರಕುಗಳ ಅಥವಾ ಸೇವೆಗಳ ಆದೇಶಕ್ಕೆ ಪ್ರತಿಯಾಗಿ ನೀಡಿದ ಮುಂಗಡ;

(vi) ಒಬ್ಬ ವ್ಯಕ್ತಿಯಿಂದ ಅಥವಾ ಒಂದು ಫರ್ಮ್‌ನಿಂದ ಅಥವಾ ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ, ಲೇವಾದೇವಿಗೆ ಸಂಬಂಧಪಟ್ಟ ಯಾವುದೇ ಅಧಿನಿಯಮಿತಿಯ ಅಡಿಯಲ್ಲಿ ನೋಂದಾಯಿತವಾದ ವ್ಯಕ್ತಿಗಳ ಸಂಘದಿಂದ ಸ್ವೀಕರಿಸಲಾದ ಯಾವುದೇ ಮೊಬಲಗು: ಮತ್ತು

(vi) ಒಂದು 'ಚಿಟ್' ಸಂಬಂಧದಲ್ಲಿ ವಂತಿಗೆಯ ರೂಪದಲ್ಲಿ ಸ್ವೀಕರಿಸಲಾದ ಯಾವುದೇ ಮೊಬಲಗು,

**ವಿವರಣೆ I:** 'ಚಿಟ್' ಎಂಬುದಕ್ಕೆ, ಚಿಟ್‌ಫಂಡ್‌ಗಳ ಅಧಿನಿಯಮ, 1982ರ (1982ರ ಕೇಂದ್ರ ಅಧಿನಿಯಮ 40) 2ನೇ ಪ್ರಕರಣದ (ಬಿ) ಖಂಡದಲ್ಲಿ ಅದಕ್ಕೆ ಗೊತ್ತುಪಡಿಸಲಾದ ಅರ್ಥವಿರುತ್ತದೆ.

**ವಿವರಣೆ II:** ಯಾವುದೇ ಸ್ವತ್ತಿನ ಮಾರಾಟದ ಮೇಲೆ (ಚರಸ್ವತ್ತಾಗಿರಲಿ ಅಥವಾ ಸ್ಥಿರಸ್ವತ್ತಾಗಿರಲಿ) ಮಾರಾಟದಾರನಿಂದ ಖರೀದಿದಾರನಿಗೆ ಕೊಡಲಾದ ಸಾಲವನ್ನು ಈ ಖಂಡದ ಉದ್ದೇಶಗಳಿಗಾಗಿ ಠೇವಣಿ ಎಂಬುದಾಗಿ ಪರಿಗಣಿಸತಕ್ಕದ್ದಲ್ಲ.

(3) "ಠೇವಣಿದಾರ" ಎಂದರೆ, ಹಣಕಾಸು ಸಂಸ್ಥೆಯಲ್ಲಿ ಠೇವಣಿ ಇಟ್ಟ ವ್ಯಕ್ತಿ,

(4) 'ಹಣಕಾಸು ಸಂಸ್ಥೆ' ಎಂದರೆ, ಯಾವುದೇ ಯೋಜನೆ ಅಥವಾ ವ್ಯವಸ್ಥೆಯ ಮೇರೆಗೆ ಅಥವಾ ಇತರ ಯಾವುದೇ ರೀತಿಯಲ್ಲಿ ಠೇವಣಿಗಳನ್ನು ಸ್ವೀಕರಿಸುವ ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು ಆದರೆ, ಅದು ಯಾವುದೇ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಒಂದು ನಿಗಮ ಅಥವಾ ಸಹಕಾರ ಸಂಘವನ್ನು ಅಥವಾ ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ (1949ರ ಕೇಂದ್ರ ಅಧಿನಿಯಮ 10) 5ನೇ ಪ್ರಕರಣದ (ಸಿ) ಖಂಡದ ಮೇರೆಗೆ ಪರಿಭಾಷಿಸಲಾದ ಬ್ಯಾಂಕಿಂಗ್ ಕಂಪನಿಯನ್ನು ಒಳಗೊಳ್ಳುವುದಿಲ್ಲ;

(5) "ಸರ್ಕಾರ" ಎಂದರೆ, ರಾಜ್ಯ ಸರ್ಕಾರ;

(6) "ವಿಶೇಷ ನ್ಯಾಯಾಲಯ" ಎಂದರೆ, 10ನೇ ಪ್ರಕರಣದ ಅಡಿಯಲ್ಲಿ ಸ್ಥಾಪನೆಯಾದ ನ್ಯಾಯಾಲಯ.

## ಅಧ್ಯಾಯ – II

**3. ಠೇವಣಿಗಳನ್ನು ಹಿಂದಿರುಗಿಸಲು ತಪ್ಪಿದಲ್ಲಿ ಸ್ವತ್ತುಗಳ ಜಪ್ತಿ.–** (1) ಸರ್ಕಾರವು ಅಥವಾ ತಮ್ಮ ತಮ್ಮ ಅಧಿಕಾರವ್ಯಾಪ್ತಿಯೊಳಗೆ ಜಿಲ್ಲಾ ಮ್ಯಾಜಿಸ್ಟ್ರೇಟರುಗಳು ಈ ಪ್ರಕರಣದಲ್ಲಿ ಉಲ್ಲೇಖಿಸಲಾದ ದೂರಿನ ಅಥವಾ ಮೋಸದ ವ್ಯವಹಾರದ ಸಂಬಂಧದಲ್ಲಿ, ಸ್ವಪ್ರೇರಣೆಯಿಂದ ಅಥವಾ ಫಿರ್ಯಾದನ್ನು ಸ್ವೀಕರಿಸಿದ ಮೇಲೆ ತನಿಖೆ ನಡೆಸುವಂತೆ ಮಾಡಬಹುದು. ಜಿಲ್ಲಾ ಮ್ಯಾಜಿಸ್ಟ್ರೇಟರು ಫಿರ್ಯಾದಿನ ಜೊತೆಗೆ ತಮ್ಮ ವರದಿಯನ್ನು ಆದಷ್ಟು ಬೇಗನೆ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ,

(i) ಯಾವುದೇ ಹಣಕಾಸು ಸಂಸ್ಥೆಯು,–

(ಎ) ಠೇವಣಿಯ ಅವಧಿ ಪೂರ್ಣಗೊಂಡ ಮೇಲೆ ಅಥವಾ ಠೇವಣಿದಾರನು ಕೇಳಿದಾಗ ಠೇವಣಿಯನ್ನು ಹಿಂದಿರುಗಿಸಲು; ಅಥವಾ

(ಬಿ) ಬಡ್ಡಿಯನ್ನು ಅಥವಾ ಇತರ ಭರವಸೆ ನೀಡಿದ ಪ್ರಯೋಜನವನ್ನು ನೀಡಲು; ಅಥವಾ

(ಸಿ) ಅಂಥ ಠೇವಣಿಗೆ ಪ್ರತಿಯಾಗಿ ಸೇವೆಯನ್ನು ಒದಗಿಸಲು,

ತಪ್ಪಿದೆ ಎಂಬುದಾಗಿ ಯಾವೊಬ್ಬ ಠೇವಣಿದಾರನಿಂದ ದೂರನ್ನು ಸ್ವೀಕರಿಸಿದ ಮೇಲೆ ಅಥವಾ ಅನ್ಯಥಾ ಸರ್ಕಾರಕ್ಕೆ ಮನದಟ್ಟಾದರೆ; ಅಥವಾ

(ii) ಯಾವುದೇ ಹಣಕಾಸು ಸಂಸ್ಥೆಯು ಠೇವಣಿದಾರರನ್ನು ವಂಚಿಸುವ ಉದ್ದೇಶದಿಂದ ಠೇವಣಿದಾರರ ಹಿತಾಸಕ್ತಿಗೆ ಧಕ್ಕೆ ಉಂಟುಮಾಡಲು ಲೆಕ್ಕಹಾಕಿದ ರೀತಿಯಲ್ಲಿ ವರ್ತಿಸುತ್ತಿದೆ ಎಂದು ಸರ್ಕಾರಕ್ಕೆ ನಂಬಲು ಕಾರಣವಿದ್ದಲ್ಲಿ, ಅಥವಾ

(iii) ಅಂಥ ಹಣಕಾಸು ಸಂಸ್ಥೆಯು, ಠೇವಣಿಗಳನ್ನು ಹಿಂದಿರುಗಿಸುವ ಅಥವಾ ಬಡ್ಡಿ ಸಂದಾಯ ಮಾಡುವ ಅಥವಾ ಭರವಸೆ ನೀಡಿದ ಇತರ ಪ್ರಯೋಜನಗಳನ್ನು ಅಥವಾ ಠೇವಣಿಯನ್ನು ಸ್ವೀಕರಿಸಿದುದಕ್ಕೆ ಪ್ರತಿಯಾಗಿ ಸೇವೆಗಳನ್ನು ಒದಗಿಸುವ ಸಂಭವವಿಲ್ಲವೆಂದು ಸರ್ಕಾರಕ್ಕೆ ಮನದಟ್ಟಾದಲ್ಲಿ,

ಅಂಥ ಹಣಕಾಸು ಸಂಸ್ಥೆಯ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವ ಸಲುವಾಗಿ ಸರ್ಕಾರವು ಹಣಕಾಸು ಸಂಸ್ಥೆಯ ಹೆಸರಿನಲ್ಲಿ ಅಥವಾ ಇತರ ಯಾವೊಬ್ಬ ವ್ಯಕ್ತಿಯ ಹೆಸರಿನಲ್ಲಿ ಹಣಕಾಸು ಸಂಸ್ಥೆಯು ಸಂಗ್ರಹಿಸಿದ ಠೇವಣಿಗಳಿಂದ ಮತ್ತು ಅವುಗಳ ಪೈಕಿಯಿಂದ ಆರ್ಜಿಸಲಾಗಿದೆಯೆಂದು ನಂಬಲಾದ ಹಣವನ್ನು ಅಥವಾ ಸ್ವತ್ತನ್ನು ಮತ್ತು ಅಂಥ ಹಣ ಅಥವಾ ಇತರ ಸ್ವತ್ತು ಜಪ್ತಿ ಮಾಡುವುದಕ್ಕಾಗಿ ಲಭ್ಯವಿಲ್ಲವೆಂದು ಅಥವಾ ಠೇವಣಿಗಳನ್ನು ಮರು ಸಂದಾಯ ಮಾಡಲು ಸಾಕಷ್ಟು ಇಲ್ಲವೆಂದು ಕಂಡುಬಂದರೆ, ಸದರಿ ಹಣಕಾಸು ಸಂಸ್ಥೆಗಳ ಅಂಥ ಇತರ ಸ್ವತ್ತನ್ನು ಅಥವಾ ಸದರಿ ಹಣಕಾಸು ಸಂಸ್ಥೆಗಳ ಪ್ರವರ್ತಕರ, ಪಾಲುದಾರರ, ನಿರ್ದೇಶಕರ, ವ್ಯವಸ್ಥಾಪಕರ ಅಥವಾ ಸದರಿ ಹಣಕಾಸು ಸಂಸ್ಥೆಗಳ ಸದಸ್ಯರ ಅಥವಾ ಯಾವೊಬ್ಬ ಇತರ ವ್ಯಕ್ತಿಯ ವೈಯಕ್ತಿಕ ಸ್ವತ್ತನ್ನು, ಜಪ್ತಿ ಮಾಡುವ ಒಂದು ಆದೇಶವನ್ನು, ಲಿಖಿತದಲ್ಲಿ ಕಾರಣಗಳನ್ನು ದಾಖಲ್ಮಾಡಿ, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸುವ ಮೂಲಕ ಹೊರಡಿಸಬಹುದು.

(3) ಸರ್ಕಾರವು, (2)ನೇ ಉಪ ಪ್ರಕರಣದ ಅಡಿಯಲ್ಲಿ ಮಾಡಿದ ತಾತ್ಕಾಲಿಕ ಆದೇಶವನ್ನು ಸರ್ಕಾರಿ ರಾಜ್ಯ ಪತ್ರದಲ್ಲಿ ಮತ್ತು ವ್ಯಾಪಕ ಪ್ರಚಾರವುಳ್ಳ ಎರಡು ದಿನಪತ್ರಿಕೆಗಳಲ್ಲಿ ಅಧಿಸೂಚಿಸತಕ್ಕದ್ದು ಮತ್ತು ಅಂಥ ಆದೇಶದ ಒಂದು ಪ್ರತಿಯನ್ನು ಹಾಗೆ ಜಪ್ತಿ ಮಾಡಲಾದ ಸ್ವತ್ತಿನ ಎದ್ದು ಕಾಣುವ ಸ್ಥಳದಲ್ಲಿ ಅಂಟಿಸುವಂತೆ ಮಾಡತಕ್ಕದ್ದು.

(4) (2)ನೇ ಉಪ ಪ್ರಕರಣದ ಅಡಿಯಲ್ಲಿಯ ಆದೇಶದ ಪ್ರಕಟಣೆಯ ತರುವಾಯ, ಹಣಕಾಸು ಸಂಸ್ಥೆಯ ಮತ್ತು ಅದರಲ್ಲಿ ಹೇಳಿದ ವ್ಯಕ್ತಿಗಳ ಎಲ್ಲ ಸ್ವತ್ತುಗಳು ಮತ್ತು ಆಸ್ತಿಗಳು, ವಿಶೇಷ ನ್ಯಾಯಾಲಯದಿಂದ ಮುಂದಿನ ಆದೇಶವು ಬರುವವರೆಗೂ ಸರ್ಕಾರವು ನೇಮಕ ಮಾಡಿದ ಸಕ್ಷಮ ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು.

**4. ಆವರಣಗಳನ್ನು ಪ್ರವೇಶಿಸಲು ಮತ್ತು ಕೆಲವೊಂದು ದಸ್ತಾವೇಜುಗಳನ್ನು ತಪಾಸಣೆ ಮಾಡಲು ಅಧಿಕಾರ.-** (1) ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಸಕ್ಷಮ ಪ್ರಾಧಿಕಾರಿಯು ಅಥವಾ ಈ ಸಂಬಂಧದಲ್ಲಿ ಅವನು ಪ್ರಾಧಿಕರಿಸಿದ ಇತರ ಯಾವೊಬ್ಬ ಪ್ರಾಧಿಕಾರಿಯು, ಯಾವುದೇ ರಿಜಿಸ್ಟರು, ಪುಸ್ತಕ, ದಾಖಲೆ, ಕಾಗದಪತ್ರ, ಅರ್ಜಿಯನ್ನು, ವಿದ್ಯುನ್ಮಾನ ಮಾಹಿತಿ ಸಂಗ್ರಹಣೆ ಮತ್ತು ಮರು ಪಡೆಯುವಿಕೆ ಸಾಧನದಲ್ಲಿ ಅಥವಾ ಮಾಧ್ಯಮದಲ್ಲಿನ ಮಾಹಿತಿಯನ್ನು, ವಿಲೇಖ ಅಥವಾ ವ್ಯವಹರಣೆಗಳನ್ನು ಇಡಲಾಗಿದೆ ಎಂದು ನಂಬಲು ಕಾರಣವಿರುವ ಯಾವುವೇ ಆವರಣಗಳನ್ನು ಪ್ರವೇಶಿಸಲು ಮತ್ತು ಶೋಧಿಸಲು ಮತ್ತು ತಪಾಸಣೆ ಮಾಡಲು ಮತ್ತು ತಾನು ಅವಶ್ಯಕವೆಂದು ಭಾವಿಸುವಂಥ ಟಿಪ್ಪಣಿಗಳನ್ನು ಮತ್ತು ಉದ್ಧ ೃತ ಭಾಗಗಳನ್ನು ತೆಗೆದುಕೊಳ್ಳಲು ಅಧಿಕಾರ ಹೊಂದಿರತಕ್ಕದ್ದು.

(2) ಅಂಥ ರಿಜಿಸ್ಟರು, ಪುಸ್ತಕ, ದಾಖಲೆ, ಕಾಗದಪತ್ರ, ಅರ್ಜಿ, ವಿಲೇಖ ಅಥವಾ ವ್ಯವಹರಣೆಗಳನ್ನು ತನ್ನ ಅಭಿರಕ್ಷೆಯಲ್ಲಿ ಇಟ್ಟುಕೊಂಡಿರುವ ಅಥವಾ ನಿರ್ವಹಿಸುತ್ತಿರುವ ಪ್ರತಿಯೊಬ್ಬ ವ್ಯಕ್ತಿಯು, ಸೂಕ್ತವಾದ ಎಲ್ಲಾ ಕಾಲಗಳಲ್ಲೂ ಅವುಗಳನ್ನು ಹಾಜರುಪಡಿಸತಕ್ಕದ್ದು ಅಥವಾ ಸಕ್ಷಮ ಪ್ರಾಧಿಕಾರಿಯು ಅಥವಾ ಸಕ್ಷಮ ಪ್ರಾಧಿಕಾರಿಯು ಪ್ರಾಧಿಕರಿಸಿದ ಯಾವೊಬ್ಬ ಇತರ ಪ್ರಾಧಿಕಾರಿಯು, ಅವುಗಳನ್ನು ತಪಾಸಣೆ ಮಾಡಲು ಮತ್ತು ತಾನು ಅವಶ್ಯಕವೆಂದು ಭಾವಿಸುವಂತೆ ಅವುಗಳ ಟಿಪ್ಪಣಿ ಅಥವಾ ಉದ್ಧ ೃತ ಭಾಗಗಳನ್ನು ತೆಗೆದುಕೊಳ್ಳಲು ಮತ್ತು ಅವಶ್ಯಕವಾದರೆ ಅವುಗಳನ್ನು ವಶಪಡಿಸಿಕೊಳ್ಳಲು ಮತ್ತು ಪರಿಬದ್ಧಗೊಳಿಸಲು ಅನುಮತಿಸತಕ್ಕದ್ದು:

ಪರಂತು, (ವ್ಯವಹಾರದ ಜೊತೆ ವಾಸದ ಸ್ಥಳವಾಗಿರದ) ಯಾವ ವಾಸದ ಸ್ಥಳವನ್ನೂ ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನುಳ್ಳ ಮ್ಯಾಜಿಸ್ಟ್ರೇಟರು ನೀಡಿದ ಶೋಧನಾ ವಾರೆಂಟಿನ ಅಧಿಕಾರದ ಹೊರತಾಗಿ ಹಾಗೆ ಪ್ರವೇಶಿಸತಕ್ಕದ್ದಲ್ಲ ಮತ್ತು ಶೋಧಿಸತಕ್ಕದ್ದಲ್ಲ ಮತ್ತು ಈ ಪ್ರಕರಣದ ಅಡಿಯಲ್ಲಿನ ಎಲ್ಲ ಶೋಧನೆಗಳನ್ನು ಸಾಧ್ಯವಾದಷ್ಟುಮಟ್ಟಿಗೆ ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ, ೩೩) ಉಪಬಂಧಗಳಿಗನುಸಾರ ಮಾಡತಕ್ಕದ್ದು.

**5. ಸಕ್ಷಮ ಪ್ರಾಧಿಕಾರಿ.-** (1) ಸರ್ಕಾರವು, ಈ ಅಧಿನಿಯಮದ ಉದ್ದೇಶಕ್ಕಾಗಿ "ಸಕ್ಷಮ ಪ್ರಾಧಿಕಾರಿ"ಯಾಗಿ, ಅಸಿಸ್ಟೆಂಟ್ ಕಮೀಷನರರ ಹುದ್ದೆಗೆ ಕಡಿಮೆಯಲ್ಲದ ಒಬ್ಬ ಅಧಿಕಾರಿಯನ್ನು ಅಧಿಸೂಚನೆ ಮೂಲಕ ನೇಮಕ ಮಾಡತಕ್ಕದ್ದು.

COURT BOOK
EMPOWERING LEGAL CLARITY

(2) ಸಕ್ಷಮ ಪ್ರಾಧಿಕಾರಿಯು 3ನೇ ಪ್ರಕರಣದ ಅಡಿಯಲ್ಲಿ ಮಾಡಿದ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಜಪ್ತಿಯ ಆದೇಶವನ್ನು ನಿರುಪಾಧಿಕಗೊಳಿಸುವುದಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿ ರಚಿತವಾದ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸತಕ್ಕದ್ದು.

COURT BOOK
EMPOWERING LEGAL CLARITY

(3) (2)ನೇ ಉಪ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿಯ ಜೊತೆಯಲ್ಲಿ, 3ನೇ ಪ್ರಕರಣದ ಅಡಿಯಲ್ಲಿ ಯಾವ ಕಾರಣಗಳ ಮೇಲೆ ಸದರಿ ಆದೇಶವನ್ನು ಹೊರಡಿಸಲಾಗಿದೆಯೋ ಅವುಗಳನ್ನು ತಿಳಿಸುವ ಮತ್ತು ಠೇವಣಿಗಳಿಂದ ಆರ್ಜಿಸಲಾಗಿದೆ ಎಂದು ನಂಬಲಾದ ಹಣದ ಮೊತ್ತ ಅಥವಾ ಇತರ ಸ್ವತ್ತು ಮತ್ತು ಯಾರ ಹೆಸರಿನಲ್ಲಿ ಅಂಥ ಸ್ವತ್ತನ್ನು ತೊಡಗಿಸಲಾಗಿದೆಯೋ ಅಥವಾ ಆರ್ಜಿಸಲಾಗಿದೆ ಎಂದು ನಂಬಲಾಗಿದೆಯೋ ಆ ವ್ಯಕ್ತಿಗಳ ಬಗ್ಗೆ ಅಥವಾ 3ನೇ ಪ್ರಕರಣದ ಅಡಿಯಲ್ಲಿ ಜಪ್ತಿ ಮಾಡಲಾದ ಯಾವುದೇ ಇತರ ಸ್ವತ್ತಿನ ಬಗ್ಗೆ ವಿವರಗಳು ಯಾವುವಾದರೂ ಇದ್ದರೆ, ಅವುಗಳನ್ನು ತಿಳಿಸುವ ಒಂದು ಅಥವಾ ಹೆಚ್ಚು ಅಫಿದಾವಿತ್ತುಗಳು ಇರತಕ್ಕದ್ದು.

(4) ಒಂದು ವಿಶೇಷ ನ್ಯಾಯಾಲಯ ಅಥವಾ ಪದಾಂಕಿತ ನ್ಯಾಯಾಲಯ ಅಥವಾ ನ್ಯಾಯಾಂಗ ವೇದಿಕೆಯ ಅಧಿಕಾರ ವ್ಯಾಪ್ತಿಯಲ್ಲಿರುವ ಒಂದು ಹಣಕಾಸು ಸಂಸ್ಥೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ಅಧಿಸೂಚಿಸಲಾದ ಯಾವುದೇ ವ್ಯಕ್ತಿಗೆ ಸೇರಿರುವಂಥ ಅಥವಾ ಸೇರಿದೆ ಎಂದು ತೋರಿಕೆಗೇ ಗೊತ್ತಾಗುವಂತಹ ಹಣ ಅಥವಾ ಆಸ್ತಿ ಅಥವಾ ಸ್ವತ್ತಿಗೆ ಸಂಬಂಧಪಟ್ಟ ವಿವಾದ ಅಥವಾ ವಸ್ತು ವಿಷಯವನ್ನು ಕುರಿತು ನ್ಯಾಯ ನಿರ್ಣಯ ಮಾಡಲು ಯಾವುದೇ ಇದೇ ತರಹದ ಅಧಿನಿಯಮಿತಿ ಅಡಿಯಲ್ಲಿ ಯಾವುದೇ ಇತರ ರಾಜ್ಯ ಸರ್ಕಾರವು ಸ್ಥಾಪಿಸಿರುವ ಅಥವಾ ರಚಿಸಿರುವ ಅಥವಾ ಯಾವುದೇ ಅಧಿಕಾರಗಳನ್ನು ವಹಿಸಿಕೊಟ್ಟಿರುವ ಯಾವುದೇ ಅಂಥ ವಿಶೇಷ ನ್ಯಾಯಾಲಯ, ಪದಾಂಕಿತ ನ್ಯಾಯಾಲಯ ಅಥವಾ ನ್ಯಾಯಾಂಗ ವೇದಿಕೆಗೂ ಸಕ್ಷಮ ಪ್ರಾಧಿಕಾರಿಯು ಈ ಅಧಿನಿಯಮದ ಉಪಬಂಧಗಳಿಗೆ ಪರಿಣಾಮವನ್ನು ನೀಡುವುದಕ್ಕಾಗಿ ಸೂಕ್ತ ಆದೇಶಗಳನ್ನು ನೀಡಬೇಕೆಂದು ಒಂದು ಅರ್ಜಿಯನ್ನು ಹಾಕಿಕೊಳ್ಳಬಹುದು.

**6. ಸಕ್ಷಮ ಪ್ರಾಧಿಕಾರಿಯ ಕರ್ತವ್ಯಗಳು ಮತ್ತು ಅಧಿಕಾರಗಳು.-** (1) ನೇಮಕದ ಆದೇಶವನ್ನು ಸ್ವೀಕರಿಸಿದ ಮೇಲೆ, ಸಕ್ಷಮ ಪ್ರಾಧಿಕಾರಿಯು, ತ್ವರಿತವಾಗಿ ಸಂಬಂಧಪಟ್ಟ ಹಣಕಾಸು ಸಂಸ್ಥೆಯ ಎಲ್ಲ ಹಣ ಮತ್ತು ಸ್ವತ್ತುಗಳ ವಾಸ್ತವಿಕ ಸ್ವಾಧೀನತೆ ತೆಗೆದುಕೊಳ್ಳುವುದಕ್ಕಾಗಿ ಅವಶ್ಯಕ ಮತ್ತು ಯುಕ್ತವಾದಂಥ ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರಿಯು ಮೇಲ್ಕಂಡ ಉದ್ದೇಶಕ್ಕಾಗಿ ಅವಶ್ಯಕವಾದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ನಿಹಿತವಾದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಸಕ್ಷಮ ಪ್ರಾಧಿಕಾರಿಯು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಬಹುದು ಮತ್ತು,-

(ಎ) ಯಾವೊಬ್ಬ ಪೋಲೀಸ್ ಪ್ರಾಧಿಕಾರಿಯ ಅಥವಾ ಯಾವುದೇ ಇತರ ಪ್ರಾಧಿಕಾರಿಯ ಅಥವಾ ವ್ಯಕ್ತಿಯ ನೆರವು ಕೋರಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅಂಥ ಕೋರಿಕೆಯ ಮೇಲೆ ಅವಶ್ಯಕ ನೆರವು ನೀಡುವುದು ಪೋಲೀಸ್ ಪ್ರಾಧಿಕಾರಿಯ ಅಥವಾ ಅಂಥ ಇತರ ಪ್ರಾಧಿಕಾರಿಯ ಅಥವಾ ವ್ಯಕ್ತಿಯ ಕರ್ತವ್ಯವಾಗಿರತಕ್ಕದ್ದು;

(ಬಿ) ಯಾವುದೇ ಅನುಸೂಚಿತ ವಾಣಿಜ್ಯ ಬ್ಯಾಂಕಿನಲ್ಲಿ, ಬ್ಯಾಂಕ್ ಖಾತೆ ತೆರೆಯಲು ಮತ್ತು ವಸೂಲ್ಮಾಡಿದ ಎಲ್ಲ ಹಣವನ್ನು ಜಮೆ ಮಾಡಲು ಮತ್ತು ಸಕ್ಷಮ ಪ್ರಾಧಿಕಾರಿಯಾಗಿ ತನ್ನ ಸಾಮರ್ಥ್ಯದಲ್ಲಿ ಸ್ವೀಕರಿಸಿದ ಹಣದ ಸಂಬಂಧದಲ್ಲಿ ವ್ಯವಹರಿಸುವಾಗ ಬ್ಯಾಂಕ್ ಖಾತೆಗಳನ್ನು ನಿರ್ವಹಿಸಲು ಹಕ್ಕುಳ್ಳವನಾಗಿರತಕ್ಕದ್ದು;

(ಸಿ) ಹಣಕಾಸು ಸಂಸ್ಥೆಯ ಯಾವುದೇ ಹಣ ಅಥವಾ ಸ್ವತ್ತುಗಳ ಸ್ವಾಧೀನತೆಯಲ್ಲಿರುವನೆಂದು ಅಥವಾ ನಿಯಂತ್ರಣ ಹೊಂದಿರುವನೆಂದು ನಂಬಲಾದ ಯಾವೊಬ್ಬ ವ್ಯಕ್ತಿಯನ್ನು, ಅವಶ್ಯಕ ಮಾಹಿತಿಯನ್ನು ಒದಗಿಸುವಂತೆ ಮತ್ತು ಅಂಥ ಸ್ವತ್ತುಗಳ ಸ್ವಾಧೀನತೆಯನ್ನು ಸಕ್ಷಮ ಪ್ರಾಧಿಕಾರಿಗೆ ಒಪ್ಪಿಸುವಂತೆ ಅಗತ್ಯಪಡಿಸಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅಂಥ ವ್ಯಕ್ತಿಯು ವಿಳಂಬ ಮಾಡದೇ ಕೋರಿಕೆಯನ್ನು ಪಾಲಿಸತಕ್ಕದ್ದು;

(ಡಿ) ಕಾನೂನು ವೃತ್ತಿಗಾರರನ್ನು ಅಥವಾ ಚಾರ್ಟರ್ಡ್ ಅಕೌಂಟೆಂಟರನ್ನು ಅಥವಾ ಹಣಕಾಸು ಸಂಸ್ಥೆಯ ಸ್ವತ್ತುಗಳ ಸ್ವಾಧೀನತೆ ತೆಗೆದುಕೊಳ್ಳುವುದಕ್ಕಾಗಿ ಮತ್ತು ಸ್ವತ್ತುಗಳನ್ನು ನಗದಾಗಿ ಪರಿವರ್ತಿಸಿಕೊಳ್ಳುವುದಕ್ಕಾಗಿ ಯಾರ ಸೇವೆಗಳು ಅವಶ್ಯಕವಾಗಿದೆಯೋ ಆ ಯಾವೊಬ್ಬ ಇತರ ವ್ಯಕ್ತಿಯನ್ನು ನೇಮಕ ಮಾಡಲು ಹಕ್ಕುಳ್ಳವನಾಗಿರತಕ್ಕದ್ದು;

(ಇ) ಹಣಕಾಸು ಸಂಸ್ಥೆಗೆ ಸೇರಿದ ಅಥವಾ ಅದರ ನಿಯಂತ್ರಣದಲ್ಲಿರುವ ಮಾರಾಟ ಮಾಡಬಹುದಾದ ಭದ್ರತಾ ಪತ್ರದ ಅಥವಾ ವರ್ಗಾವಣೀಯ ಲಿಖಿತ ಪತ್ರದ ಸಂಬಂಧದಲ್ಲಿ, ಅದನ್ನು ಮಾರಾಟ ಮಾಡಲು, ಸ್ವೀಕರಿಸಲು, ವರ್ಗಾವಣೆ ಮಾಡಲು, ಹಿಂಬರಹ ಮಾಡಲು, ಮುರಿಸಲು ಅಥವಾ ಅನ್ಯಥಾ ವ್ಯವಹರಿಸಲು ಮತ್ತು ಅದರ ಸೂಕ್ತ ವಿಮೋಚನೆ ಮಾಡಲು ಹಕ್ಕುಳ್ಳವನಾಗಿರತಕ್ಕದ್ದು;

(ಎಫ್) ಹಣಕಾಸು ಸಂಸ್ಥೆಗೆ ಸೇರಿದ ಅಥವಾ ಅದರ ನಿಯಂತ್ರಣದಲ್ಲಿರುವ ಯಾವುದೇ ಚರ ಅಥವಾ ಸ್ಥಿರ ಸ್ವತ್ತನ್ನು ಮಾರಾಟ ಮಾಡಲು, ವರ್ಗಾವಣೆ ಮಾಡಲು ಅಥವಾ ಅನ್ಯಥಾ ನಗದಾಗಿ ಪರಿವರ್ತಿಸಲು ಅಥವಾ ಹಣಕಾಸು ಸಂಸ್ಥೆಗೆ ಸೇರಿದ ಅಥವಾ ಅದರ ನಿಯಂತ್ರಣದಲ್ಲಿರುವ ಸ್ವತ್ತನ್ನು, ಸಾರ್ವಜನಿಕ ಹರಾಜಿನ ಮೂಲಕ ಅಥವಾ ವಿಶೇಷ ನ್ಯಾಯಾಲಯದ ಪೂರ್ವಾನುಮೋದನೆಯೊಡನೆ ಖಾಸಗಿ ವ್ಯವಸ್ಥೆಗಳ ಮೂಲಕ ಮಾರಾಟ ಮಾಡಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಸ್ವತ್ತಿನಲ್ಲಿರುವ ನಾಶ ಹೊಂದುವ ವಸ್ತುಗಳನ್ನು, ಸಕ್ಷಮ ಪ್ರಾಧಿಕಾರಿಯು ಸೂಕ್ತವೆಂದು ಭಾವಿಸಿದಷ್ಟು ಬೇಗನೆ ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡತಕ್ಕದ್ದು.

(ಜಿ) ವಿಶೇಷ ನ್ಯಾಯಾಲಯದ ಆದೇಶದ ಅನುಸಾರವಾಗಿ ಬ್ಯಾಂಕ್ ಖಾತೆಗಳಿಂದ ಸಂದಾಯಗಳನ್ನು ಮಾಡಲು ಹಕ್ಕುಳ್ಳವನಾಗಿರತಕ್ಕದ್ದು; ಮತ್ತು

(ಎಚ್) ಹಣಕಾಸು ಸಂಸ್ಥೆಯ ಸ್ವತ್ತುಗಳ ತ್ವರಿತ ನಗದು ಪರಿವರ್ತನೆಗಾಗಿ ಅವಶ್ಯಕವಾಗಬಹುದಾದ ಎಲ್ಲ ಮತ್ತು ಪ್ರತಿಯೊಂದು ಕಾರ್ಯವನ್ನು ಮಾಡಲು ಹಕ್ಕುಳ್ಳವನಾಗಿರತಕ್ಕದ್ದು.

**ವಿವರಣೆ.-** ಈ ಪ್ರಕರಣದ ಉದ್ದೇಶಕ್ಕಾಗಿ " ಹಣಕಾಸು ಸಂಸ್ಥೆ ", ಎಂಬ ಪದಾವಳಿಯು ಸದರಿ ಸಂಸ್ಥೆಯ ನಿರ್ದೇಶಕರು, ಪಾಲುದಾರರು, ಪ್ರವರ್ತಕರು, ವ್ಯವಸ್ಥಾಪಕರು ಅಥವಾ ಸದಸ್ಯರನ್ನು ಅಥವಾ 3ನೇ ಪ್ರಕರಣದ ಅಡಿಯಲ್ಲಿ ಯಾರ ಸ್ವತ್ತನ್ನು ಅಥವಾ ಆಸ್ತಿಯನ್ನು ಜಪ್ತಿ ಮಾಡಲಾಗಿದೆಯೋ ಆ ಯಾವೊಬ್ಬ ಇತರ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

**7. ಸ್ವತ್ತುಗಳ ಮತ್ತು ಠೇವಣಿಗಳ ಹೊಣೆಗಳ ನಿರ್ಧರಣೆ.-** (1) ತನ್ನ ನೇಮಕದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಸಕ್ಷಮ ಪ್ರಾಧಿಕಾರಿಯು, ಹಣಕಾಸು ಸಂಸ್ಥೆಯ ಠೇವಣಿ ಹೊಣೆಗಳ ಮತ್ತು ಸ್ವತ್ತುಗಳ ನಿರ್ಧರಣೆ ಮಾಡತಕ್ಕದ್ದು ಮತ್ತು ಅದರ ಬಗ್ಗೆ ಒಂದು ವರದಿಯನ್ನು ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು.

(2) ಆ ತರುವಾಯ ಸಕ್ಷಮ ಪ್ರಾಧಿಕಾರಿಯು, ಭದ್ರತೆ ಪಡೆದ ಸಾಲ ಕೊಟ್ಟವರು ಯಾರಾದರೂ ಇದ್ದರೆ, ಅವರಿಂದ ಮತ್ತು ಹಣಕಾಸು ಸಂಸ್ಥೆಗಳ ಠೇವಣಿದಾರರಿಂದ, ಅವರು ತಮ್ಮ ಕ್ಲೇಮುಗಳನ್ನು ಸ್ಥಾಪಿಸಲು ಸೂಕ್ತ ರುಜುವಾತಿನೊಡನೆ ಕ್ಲೇಮುಗಳನ್ನು ಸಲ್ಲಿಸುವಂತೆ ಆಹ್ವಾನಿಸಿ ವೈಯಕ್ತಿಕವಾಗಿ ಅಥವಾ ಪರಿಣಾಮಕಾರಿಯಾದ ಪ್ರಸಾರ ಮಾಧ್ಯಮದ ಮೂಲಕ ನೋಟೀಸನ್ನು ನೀಡತಕ್ಕದ್ದು.

(3) (2)ನೇ ಉಪ ಪ್ರಕರಣದ ಅಡಿಯಲ್ಲಿ ಕ್ಲೇಮುದಾರರಿಗೆ ಕಳುಹಿಸಲಾದ ಅಥವಾ ಜಾರಿಗೊಳಿಸಲಾಗಿದೆ ಎಂದು ಭಾವಿಸಲಾದ, ಪ್ರತಿಯೊಂದು ನೋಟೀಸಿನಲ್ಲಿ, ನೋಟೀಸಿನ ದಿನಾಂಕದಿಂದ ಒಂದು ತಿಂಗಳ ಅವಧಿ ಮುಕ್ತಾಯವಾಗುವ ಮೊದಲು, ವಿವರಣ ಪಟ್ಟಿಯನ್ನು ಅಥವಾ ಕ್ಲೇಮನ್ನು ಸಕ್ಷಮ ಪ್ರಾಧಿಕಾರಿಗೆ ಕಳುಹಿಸದಿದ್ದರೆ, ಕ್ಲೇಮುಗಳನ್ನು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಸಂದಾಯ ಮಾಡಲು ಹಕ್ಕುಳ್ಳ ಕ್ಲೇಮು ಆಗಿ ಪರಿಗಣಿಸಲಾಗುವುದಿಲ್ಲವೆಂದು ತಿಳಿಸತಕ್ಕದ್ದು.

(4) ಭದ್ರತೆ ಪಡೆದ ಸಾಲ ಕೊಟ್ಟವನಿಗೆ ಕಳುಹಿಸಿದ ಪ್ರತಿಯೊಂದು ನೋಟೀಸಿನಲ್ಲಿ, ನೋಟೀಸಿನ ದಿನಾಂಕದಿಂದ ಒಂದು ತಿಂಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮೊದಲು ಭದ್ರತಾ ಪತ್ರದ ಮೌಲ್ಯಮಾಪನ ಮಾಡಲು ಅಗತ್ಯಪಡಿಸತಕ್ಕದ್ದು ಮತ್ತು ಅಂಥ ನೋಟೀಸಿನಲ್ಲಿ, ಭದ್ರತಾ ಪತ್ರದ ಮೌಲ್ಯಮಾಪನದೊಡನೆ ಕ್ಲೇಮಿನ ವಿವರಣ ಪತ್ರವನ್ನು ಸಕ್ಷಮ ಪ್ರಾಧಿಕಾರಿಗೆ ಕಳುಹಿಸದಿದ್ದರೆ, ಸಕ್ಷಮ ಪ್ರಾಧಿಕಾರಿಯು ಸ್ವತ: ಭದ್ರತಾ ಪತ್ರದ ಮೌಲ್ಯಮಾಪನ ಮಾಡುತ್ತಾರೆ ಮತ್ತು ಹಾಗೆ ಮಾಡಿದ ಮೌಲ್ಯಮಾಪನಕ್ಕೆ, ಅಂಥ ಭದ್ರತೆ ಪಡೆದ ಸಾಲ ಕೊಟ್ಟವರು ಬದ್ಧರಾಗಿರತಕ್ಕದ್ದು ಎಂಬುದನ್ನೂ ತಿಳಿಸತಕ್ಕದ್ದು.

COURT BOOK
EMPOWERING LEGAL CLARITY

(5) ಕ್ಲೇಮುದಾರನು (4)ನೇ ಉಪ ಪ್ರಕರಣದ ಅನುಸಾರ ನೋಟೀಸನ್ನು ಪಾಲಿಸಲು ತಪ್ಪಿದರೆ, ಸಕ್ಷಮ ಪ್ರಾಧಿಕಾರಿಯು, ತನ್ನ ಅತ್ಯುತ್ತಮ ವಿವೇಚನೆಯಂತೆ ಅಂಥ ಭದ್ರತಾ ಪತ್ರದ ಮೌಲ್ಯಮಾಪನ ಮಾಡತಕ್ಕದ್ದು.

COURT BOOK
EMPOWERING LEGAL CLARITY

**8. ಸಕ್ಷಮ ಪ್ರಾಧಿಕಾರಿಯಿಂದ ವರದಿ.-** 7ನೇ ಪ್ರಕರಣದ ಅಡಿಯಲ್ಲಿ ವರದಿಯನ್ನು ಸಲ್ಲಿಸಿದ ಮೇಲೆ ಸಕ್ಷಮ ಪ್ರಾಧಿಕಾರಿಯು, ವಸೂಲ್ಮಾಡಲಾದ ಹಣದಿಂದ ಠೇವಣಿದಾರರಿಗೆ ಸಂದಾಯ ಮಾಡುವುದಕ್ಕಾಗಿ ಅನುಮತಿ ಕೋರಿ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸತಕ್ಕದ್ದು. ಅಂಥ ಅರ್ಜಿಯನ್ನು ಸಲ್ಲಿಸುವಾಗ, ಸಕ್ಷಮ ಪ್ರಾಧಿಕಾರವು, ಠೇವಣಿದಾರರಿಗೆ ಹೊಣೆಗಳ ಮತ್ತು ಇತರ ಹೊಣೆಗಳ ನಿರ್ಧರಣೆ ಮಾಡತಕ್ಕದ್ದು ಮತ್ತು ವಸೂಲ್ಮಾಡಲಾದ ಹಣದಿಂದ ಸಂಪೂರ್ಣವಾಗಿ ಹೊಣೆಯನ್ನು ಭರಿಸಲು ಸಾಧ್ಯವಿಲ್ಲದಿದ್ದ ಸಂದರ್ಭದಲ್ಲಿ ಠೇವಣಿದಾರರಿಗೆ ಸಂದಾಯ ಮಾಡುವುದಕ್ಕಾಗಿ ವಿಶೇಷ ನ್ಯಾಯಾಲಯದ ಅನುಮತಿ ಕೋರತಕ್ಕದ್ದು ಮತ್ತು ವಿಶೇಷ ನ್ಯಾಯಾಲಯದ ಆದೇಶಕ್ಕನುಸಾರ ಹಣದ ಬಟವಾಡೆ ಮಾಡತಕ್ಕದ್ದು.

## ಅಧ್ಯಾಯ - III

**9. ಹಣಕಾಸು ಸಂಸ್ಥೆಯಿಂದ ವಂಚನೋದ್ದೇಶದ ತಪ್ಪುವಿಕೆ.-** ಯಾವುದೇ ಹಣಕಾಸು ಸಂಸ್ಥೆಯು, ವಾಗ್ದಾನ ಮಾಡಿದಂತೆ ಅವಧಿಯು ಪೂರ್ಣಗೊಂಡ ಮೇಲೆ ಬಡ್ಡಿ, ಬೋನಸ್, ಲಾಭದ ರೂಪದಲ್ಲಿ ಅಥವಾ ಇತರ ಯಾವುದೇ ರೂಪದಲ್ಲಿ ಯಾವುದೇ ಪ್ರಯೋಜನದ ಜೊತೆಗೆ ಠೇವಣಿಯ ಯಾವುದೇ ಮರುಸಂದಾಯ ಮಾಡಲು ವಂಚನೋದ್ದೇಶದಿಂದ ತಪ್ಪಿದರೆ ಅಥವಾ ಠೇವಣಿಗೆ ಪ್ರತಿಯಾಗಿ ಭರವಸೆ ನೀಡಿದಂತೆ ಸೇವೆ ಸಲ್ಲಿಸಲು ಮೋಸದಿಂದ ತಪ್ಪಿದರೆ, ಪ್ರವರ್ತಕ, ನಿರ್ದೇಶಕ, ಪಾಲುದಾರ, ವ್ಯವಸ್ಥಾಪಕನೂ ಸೇರಿದಂತೆ ಪ್ರತಿಯೊಬ್ಬ ವ್ಯಕ್ತಿ ಅಥವಾ ಅಂಥ ಹಣಕಾಸು ಸಂಸ್ಥೆಯ ವ್ಯವಹಾರ ಅಥವಾ ಕಾರ್ಯಕಲಾಪಗಳ ವ್ಯವಸ್ಥಾಪನೆಗೆ ಅಥವಾ ನಡೆಸುವುದಕ್ಕೆ ಹೊಣೆಗಾರನಾದ ಯಾವೊಬ್ಬ ಇತರ ವ್ಯಕ್ತಿ ಅಥವಾ ನೌಕರನು, ದೋಷಸಿದ್ಧಿಯಾದ ತರುವಾಯ, ಆರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಅಂಥ ಹಣಕಾಸು ಸಂಸ್ಥೆಯು ಸಹ ಐದು ಲಕ್ಷ ರೂಪಾಯಿಗಳಿಗೆ ಸಮನಾದ ಮೊಬಲಗಿನವರೆಗೆ ವಿಸ್ತರಿಸಬಹುದಾದ ಅಥವಾ ಅಂಥ ಠೇವಣಿಗಳನ್ನು ಮೊತ್ತದ ರೂಪದಲ್ಲಿ ಹೇಳಬಹುದಾಗಿದ್ದಲ್ಲಿ, ಹಾಗೆ ಸಂದಾಯ ಮಾಡಲು ತಪ್ಪಿದ ಮೊತ್ತದ ಎರಡುಪಟ್ಟು, ಇವುಗಳಲ್ಲಿ ಯಾವುದು ಹೆಚ್ಚೋ ಆ ಮೊತ್ತದ ಜುಲ್ಮಾನೆಗೆ ಗುರಿಯಾಗತಕ್ಕದ್ದು.

ಪರಂತು, ವಿಶೇಷ ನ್ಯಾಯಾಲಯವು ತನ್ನ ತೀರ್ಪಿನಲ್ಲಿ ವಿಶೇಷ ಮತ್ತು ಸಾಕಷ್ಟು ಕಾರಣಗಳನ್ನು ದಾಖಲಿಸದೇ ಇದ್ದಲ್ಲಿ ಕಾರಾವಾಸವು ಮೂರು ವರ್ಷಗಳಿಗೆ ಕಡಿಮೆ ಇರತಕ್ಕದ್ದಲ್ಲ ಮತ್ತು ಪ್ರತಿಯೊಬ್ಬ ವ್ಯಕ್ತಿಯ ವಿರುದ್ಧ ಜುಲ್ಮಾನೆಯು, ಇಪ್ಪತ್ತು ಸಾವಿರ ರೂಪಾಯಿಗಳಿಗೆ ಕಡಿಮೆ ಇರತಕ್ಕದ್ದಲ್ಲ ಮತ್ತು ಅಂಥ ಹಣಕಾಸು ಸಂಸ್ಥೆಯ ವಿರುದ್ಧ ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆ ಇರತಕ್ಕದ್ದಲ್ಲ.

**ವಿವರಣೆ.-** ಈ ಪ್ರಕರಣದ ಉದ್ದೇಶಕ್ಕಾಗಿ, ಒಬ್ಬ ವ್ಯಕ್ತಿಗೆ ಅಕ್ರಮ ಲಾಭ ಅಥವಾ ಇನ್ನೊಬ್ಬ ವ್ಯಕ್ತಿಗೆ ಅಕ್ರಮ ಹಾನಿ ಉಂಟು ಮಾಡುವ ಉದ್ದೇಶದಿಂದ ಒಂದು ಹಣಕಾಸು ಸಂಸ್ಥೆಯು, ತಾನು ವಾಗ್ದಾನ ಮಾಡಿದಂತೆ, ಬಡ್ಡಿ, ಬೋನಸ್, ಲಾಭದ ರೂಪದಲ್ಲಿ, ಅಥವಾ ಇತರ ಯಾವುದೇ ಅಂಥ ರೂಪದ ಪ್ರಯೋಜನಗಳ ಜೊತೆಗೆ ಅಂಥ ಠೇವಣಿಯನ್ನು ಮರುಸಂದಾಯ ಮಾಡಲು ತಪ್ಪಿದರೆ ಅಥವಾ ಅಂಥ ಠೇವಣಿಗೆ ಪ್ರತಿಯಾಗಿ ವಾಗ್ದಾನ ಮಾಡಿದ ಯಾವುದೇ ನಿರ್ದಿಷ್ಟ ಸೇವೆಯನ್ನು ಒದಗಿಸಲು ತಪ್ಪಿದರೆ ಅಥವಾ ಅಂಥ ಠೇವಣಿಯನ್ನು ಸ್ವೀಕರಿಸುವಾಗ ಕಾರ್ಯಸಾಧ್ಯವಲ್ಲದ ಅಥವಾ ವಾಣಿಜ್ಯ ದೃಷ್ಟಿಯಿಂದ ಊರ್ಜಿತವಾಗುವಂತಹವು ಅಲ್ಲದ ವಾಗ್ದಾನಗಳನ್ನು ಮಾಡಿದ ಕಾರಣದಿಂದ ಉಂಟಾದ, ಅಂಥ ತಪ್ಪುಗಳನ್ನು ಅಥವಾ ಠೇವಣಿಗಳಿಂದ ಬಂದ ಹಣವನ್ನು ಅಥವಾ ಆರ್ಜಿಸಿದ ಸ್ವತ್ತನ್ನು ಅಗತ್ಯ ಬಿದ್ದಾಗ ಹಣವನ್ನು ಮತ್ತೆ ಪಡೆದುಕೊಳ್ಳುವುದು ಸಾಧ್ಯವಾಗದಂತಹ ಅಂತರ್ನಿಹಿತ ಅಪಾಯವಿರುವಂತಹ ರೀತಿಯಲ್ಲಿ ತೊಡಗಿಸಿದ ಕಾರಣದಿಂದ ಮರು ಸಂದಾಯ ಮಾಡಲು ತಪ್ಪಿದಲ್ಲಿ ವಂಚನೋದ್ದೇಶದಿಂದ ಹಾಗೆ ಸಂದಾಯ ಮಾಡಲು ತಪ್ಪಿದೆ ಎಂದು ಅಥವಾ ನಿರ್ದಿಷ್ಟ ಸೇವೆಯನ್ನು ಸಲ್ಲಿಸಲು ವಿಫಲವಾಗಿದೆ ಎಂದು ಭಾವಿಸತಕ್ಕದ್ದು.

## ಅಧ್ಯಾಯ - IV

**10. ವಿಶೇಷ ನ್ಯಾಯಾಲಯ.**- (1) ಈ ಅಧಿನಿಯಮದ ಉದ್ದೇಶಗಳಿಗಾಗಿ ಸರ್ಕಾರವು ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಸಹಮತಿಯೊಡನೆ ಅಧಿಸೂಚನೆಯ ಮೂಲಕ ಅಂಥ ಪ್ರದೇಶಕ್ಕಾಗಿ ಅಥವಾ ಪ್ರದೇಶಗಳಿಗಾಗಿ ಅಥವಾ ಪ್ರಕರಣಗಳ ಅಂಥ ವರ್ಗಕ್ಕಾಗಿ ಅಥವಾ ವರ್ಗಗಳಿಗಾಗಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ದರ್ಜೆಗೆ ಕಡಿಮೆಯಿಲ್ಲದ ಒಬ್ಬರು ನ್ಯಾಯಾಧೀಶರನ್ನುಳ್ಳ ಒಂದು ಅಥವಾ ಹೆಚ್ಚು ವಿಶೇಷ ನ್ಯಾಯಾಲಯಗಳನ್ನು ರಚಿಸಬಹುದು.

COURT BOOK
EMPOWERING LEGAL CLARITY

(2) ವಿಶೇಷ ನ್ಯಾಯಾಲಯದ ಹೊರತಾಗಿ ಪ್ರೆಸಿಡೆನ್ಸಿ ಟೌನ್‌ಗಳ ದಿವಾಳಿತನ ಅಧಿನಿಯಮ, 1909ರ (1909ರ ಅಧಿನಿಯಮ 3) ಮತ್ತು ಪ್ರಾಂತೀಯ ದಿವಾಳಿತನ ಅಧಿನಿಯಮ, 1920ರ (1920ರ ಅಧಿನಿಯಮ 5) ಅಡಿಯಲ್ಲಿ ರಚಿತವಾದ ನ್ಯಾಯಾಲಯವೂ ಒಳಗೊಂಡಂತೆ ಇತರ ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಉಪಬಂಧಗಳು ಅನ್ವಯವಾಗುವ ಯಾವುದೇ ವಿಷಯದ ಸಂಬಂಧದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

(3) (1)ನೇ ಉಪ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಅಧಿಸೂಚನೆಯ ದಿನಾಂಕದಿಂದ ಈ ಅಧಿನಿಯಮದ ಉಪಬಂಧಗಳು ಅನ್ವಯವಾಗುವ ಯಾವುದೇ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವ ಯಾವುದೇ ಮೊಕದ್ದಮೆಯು ವಿಶೇಷ ನ್ಯಾಯಾಲಯಗಳಿಗೆ ವರ್ಗಾಯಿತವಾಗತಕ್ಕದ್ದು.

**11. ಸ್ವತ್ತುಗಳ ನಗದು ಪರಿವರ್ತನೆ ಮತ್ತು ಠೇವಣಿದಾರರಿಗೆ ಸಂದಾಯಕ್ಕೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಲಯದ ಅಧಿಕಾರಗಳು.**- (1) ವಿಶೇಷ ನ್ಯಾಯಾಲಯವು, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕಾಗಿ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) (1)ನೇ ಉಪ ಪ್ರಕರಣದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ವಿಶೇಷ ನ್ಯಾಯಾಲಯವು,

(ಎ) ಈ ಅಧಿನಿಯಮದ ಉಪಬಂಧಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂತಹ, ನಿರ್ದೇಶನವನ್ನು ಸಕ್ಷಮ ಪ್ರಾಧಿಕಾರಕ್ಕೆ ನೀಡಬಹುದು;

(ಬಿ) ಅನೇಕ ಸಾಲಗಾರರಿಂದ ಹಣಕಾಸು ಸಂಸ್ಥೆಗೆ ಬರಬೇಕಾದ ಬಾಕಿಗಳ ವಿವರಣ ಪಟ್ಟಿಯನ್ನು, ಹಣಕಾಸು ಸಂಸ್ಥೆಯ ಸ್ವತ್ತುಗಳ ಮೌಲ್ಯದ ನಿರ್ಧರಣೆಯನ್ನು ಅನುಮೋದಿಸಬಹುದು ಮತ್ತು ಠೇವಣಿದಾರರ ಮತ್ತು ಅವರವರ ಬಾಕಿಗಳ ಪಟ್ಟಿಯನ್ನು ಅಂತಿಮಗೊಳಿಸಬಹುದು;

(ಸಿ) ಹಣಕಾಸು ಸಂಸ್ಥೆಗೆ ಸೇರಿದ ಅಥವಾ ಅದರ ನಿಯಂತ್ರಣದಲ್ಲಿರುವ ಯಾವುವೇ ಸ್ವತ್ತುಗಳ ಸ್ವಾಧೀನತೆ ತೆಗೆದುಕೊಳ್ಳಲು ಮತ್ತು ಜಪ್ತಿ ಮಾಡಿದ ಸ್ವತ್ತುಗಳ ವರ್ಗಾವಣೆ ಮಾಡಲು ಅಥವಾ ನಗದಾಗಿ ಪರಿವರ್ತಿಸಲು ಅಥವಾ ಜಪ್ತಿ ಮಾಡಿದ ಸ್ವತ್ತನ್ನು ತಾನು ಸೂಕ್ತವೆಂದು ಭಾವಿಸುವಂತೆ ಅಥವಾ ಸ್ವತ್ತುಗಳ ಸ್ವರೂಪವನ್ನವಲಂಬಿಸಿ ಸಾರ್ವಜನಿಕ ಹರಾಜಿನ ಅಥವಾ ಖಾಸಗಿ ಮಾರಾಟದ ಮೂಲಕ ಮಾರಾಟಮಾಡಲು ಮತ್ತು ಮಾರಾಟದಿಂದ ದೊರೆತ ಉತ್ಪನ್ನವನ್ನು ಬ್ಯಾಂಕ್ ಖಾತೆಗಳಲ್ಲಿ ಜಮಾ ಮಾಡಲು ಸಕ್ಷಮ ಪ್ರಾಧಿಕಾರಿಗೆ ನಿರ್ದೇಶಿಸಬಹುದು;

(ಡಿ) ಹಣಕಾಸು ಸಂಸ್ಥೆಯ ಸ್ವತ್ತುಗಳ ಸ್ವಾಧೀನತೆ ತೆಗೆದುಕೊಳ್ಳುವುದಕ್ಕಾಗಿ ಮತ್ತು ನಗದಾಗಿ ಪರಿವರ್ತಿಸುವುದಕ್ಕಾಗಿ, ಸಕ್ಷಮ ಪ್ರಾಧಿಕಾರಿಯು ವಹಿಸುವ ಅವಶ್ಯಕ ವೆಚ್ಚಗಳನ್ನು ಅನುಮೋದಿಸಬಹುದು;

(ಇ) 8ನೇ ಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಸಕ್ಷಮ ಪ್ರಾಧಿಕಾರಿಯು ಠೇವಣಿದಾರರಿಗೆ ಸಂದಾಯ ಮಾಡಲು ಆದೇಶ ಮಾಡಬಹುದು ಅಥವಾ ಹಾಗೆ ನಗದಾಗಿ ಪರಿವರ್ತಿತ ಹಣವು ಸಮಗ್ರ ಠೇವಣಿಯ ಹೊಣೆಯನ್ನು ಭರಿಸಲು ಸಾಕಷ್ಟಾಗಿರದಿದ್ದ ಸಂದರ್ಭದಲ್ಲಿ ಠೇವಣಿದಾರರಿಗೆ ದಾಮಾಷಾ ಪ್ರಮಾಣದಲ್ಲಿ ಸಂದಾಯ ಮಾಡುವುದಕ್ಕಾಗಿ ಆದೇಶ ಮಾಡಬಹುದು; ಮತ್ತು

(ಎಫ್) ಕಂಪೆನಿಯ ಸ್ವತ್ತುಗಳ ನಗದು ಪರಿವರ್ತನೆಗೆ ಮತ್ತು ಹಣಕಾಸು ಸಂಸ್ಥೆಯ ಠೇವಣಿದಾರರಿಗೆ ಮರುಸಂದಾಯ ಮಾಡುವುದಕ್ಕಾಗಿ ಅಥವಾ ಅದಕ್ಕೆ ಪ್ರಾಸಂಗಿಕವಾದ ಯಾವುದೇ ವಿಷಯದ ಅಥವಾ ವಿವಾದಾಂಶದ ಮೇಲೆ ವಿಶೇಷ ನ್ಯಾಯಾಲಯವು ಸೂಕ್ತವೆಂದು ಭಾವಿಸುವ ಯಾವುದೇ ಆದೇಶವನ್ನು ಹೊರಡಿಸಬಹುದು.

**ವಿವರಣೆ.**- ಈ ಪ್ರಕರಣದ ಉದ್ದೇಶಕ್ಕಾಗಿ, 'ಹಣಕಾಸು ಸಂಸ್ಥೆ' ಎಂಬ ಪದಾವಳಿಯು, ಸದರಿ ಸಂಸ್ಥೆಯ ನಿರ್ದೇಶಕರು, ಪಾಲುದಾರರು, ಪ್ರವರ್ತಕರು, ವ್ಯವಸ್ಥಾಪಕರು ಅಥವಾ ಸದಸ್ಯರನ್ನು ಅಥವಾ 3ನೇ ಪ್ರಕರಣದ ಅಡಿಯಲ್ಲಿ ಯಾರ ಸ್ವತ್ತನ್ನು ಅಥವಾ ಆಸ್ತಿಯನ್ನು ಜಪ್ತಿ ಮಾಡಲಾಗಿದೆಯೋ ಆ ಯಾವೊಬ್ಬ ಇತರ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

COURT BOOK
EMPOWERING LEGAL CLARITY

**12. ಜಪ್ತಿಗೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಲಯದ ಅಧಿಕಾರಗಳು.**- (1) 5ನೇ ಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯನ್ನು ಸ್ವೀಕರಿಸಿದ ಮೇಲೆ ವಿಶೇಷ ನ್ಯಾಯಾಲಯವು, 3ನೇ ಪ್ರಕರಣದ ಅಡಿಯಲ್ಲಿ ಯಾರ ಸ್ವತ್ತನ್ನು ಜಪ್ತಿ ಮಾಡಿ ಸಕ್ಷಮ ಪ್ರಾಧಿಕಾರದಲ್ಲಿ ನಿಹಿತಗೊಳಿಸಲಾಗಿದೆಯೋ ಆ ಹಣಕಾಸು ಸಂಸ್ಥೆಗೆ ಮತ್ತು ಯಾವನೇ ಇತರ ವ್ಯಕ್ತಿ ಇದ್ದರೆ ಅವನಿಗೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ಅಥವಾ ಅದಕ್ಕೆ ಮೊದಲು ಜಪ್ತಿ ಆದೇಶವನ್ನು ಏಕೆ ನಿರುಪಾಧಿಕಗೊಳಿಸತಕ್ಕದ್ದಲ್ಲವೆಂಬ ಬಗ್ಗೆ ಕಾರಣವನ್ನು ತೋರಿಸಲು ಅವರನ್ನು ಕೋರಿ, ಅರ್ಜಿಯ ಪ್ರತಿಗಳು ಮತ್ತು ಅಫಿದಾವಿತ್ತುಗಳು ಮತ್ತು ಸಾಕ್ಷ್ಯದ ದಾಖಲೆ ಯಾವುದಾದರೂ ಇದ್ದರೆ ಅವುಗಳ ಸಹಿತ ಒಂದು ನೋಟೀಸನ್ನು ನೀಡತಕ್ಕದ್ದು.

(2) ವಿಶೇಷ ನ್ಯಾಯಾಲಯವು, ಹಣಕಾಸು ಸಂಸ್ಥೆಯ ಅಥವಾ (1)ನೇ ಉಪ ಪ್ರಕರಣದ ಅಡಿಯಲ್ಲಿ ಯಾರಿಗೆ ನೋಟೀಸನ್ನು ನೀಡಲಾಗಿದೆಯೋ ಆ ವ್ಯಕ್ತಿಯ ಸ್ವತ್ತಿನಲ್ಲಿ ಯಾವುದೇ ಹಿತಾಸಕ್ತಿ ಅಥವಾ ಹಕ್ಕು ಇದೆಯೆಂದು ಅಥವಾ ಇರುವ ಕ್ಲೇಮು ಮಾಡುವ ಸಂಭವವಿದೆ ಎಂದು ತನಗೆ ಮನವಿಗಳನ್ನು ಸಲ್ಲಿಸಿದ್ದ ಎಲ್ಲಾ ವ್ಯಕ್ತಿಗಳಿಗೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರುವ, ದಿನಾಂಕದಂದೇ ಹಾಜರಾಗುವಂತೆ ಮತ್ತು ಸ್ವತ್ತಿನ ಅಥವಾ ಅದರ ಯಾವುದೇ ಭಾಗದ ಜಪ್ತಿಗೆ ಸಂಬಂಧಿಸಿದಂತೆ ಅಂಥ ಸ್ವತ್ತಿನಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಅವನು ಹಿತಾಸಕ್ತಿಯನ್ನು ಹೊಂದಿದ್ದಾನೆಂಬ ಆಧಾರದ ಮೇಲೆ, ಯಾವುದೇ ಆಕ್ಷೇಪಣೆ ಮಾಡಲು ಇಚ್ಛಿಸಿದರೆ, ಹಾಗೆ ಮಾಡುವಂತೆ ಕೋರುವ ನೋಟೀಸನ್ನು ಸಹ ನೀಡತಕ್ಕದ್ದು.

(3) ಜಪ್ತಿ ಮಾಡಲಾದ ಸ್ವತ್ತಿನಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಹಿತಾಸಕ್ತಿಯನ್ನು ಕ್ಲೇಮು ಮಾಡುವ ಯಾವೊಬ್ಬ ವ್ಯಕ್ತಿಯು, ಈ ಪ್ರಕರಣದ ಅಡಿಯಲ್ಲಿ ನೋಟೀಸನ್ನು ಜಾರಿಗೊಳಿಸಿರದಿದ್ದಾಗ್ಯೂ, (4)ನೇ ಉಪ ಪ್ರಕರಣದ ಅಥವಾ (6)ನೇ ಉಪ ಪ್ರಕರಣದ ಅಡಿಯಲ್ಲಿ ಆದೇಶವನ್ನು ಹೊರಡಿಸುವುದಕ್ಕೆ ಮೊದಲು ಯಾವುದೇ ಕಾಲದಲ್ಲಿ ಮೇಲ್ಕಂಡಂತೆ ವಿಶೇಷ ನ್ಯಾಯಾಲಯಕ್ಕೆ ಆಕ್ಷೇಪಣೆಯನ್ನು ಸಲ್ಲಿಸಬಹುದು.

(4) ನಿರ್ದಿಷ್ಟಪಡಿಸಿದ ದಿನಾಂಕದಂದು ಅಥವಾ ಮೊದಲು ಯಾವುದೇ ಕಾರಣವನ್ನು ತೋರಿಸದಿದ್ದರೆ ಅಥವಾ ಯಾವುವೇ ಆಕ್ಷೇಪಣೆಗಳನ್ನು ಮಾಡದಿದ್ದರೆ, ವಿಶೇಷ ನ್ಯಾಯಾಲಯವು ಕೂಡಲೇ ಜಪ್ತಿಯ ಆದೇಶವನ್ನು ನಿರುಪಾಧಿಕಗೊಳಿಸುವ ಆದೇಶವನ್ನು ಮಾಡತಕ್ಕದ್ದು ಮತ್ತು ಜಪ್ತಿ ಮಾಡಲಾದ ಸ್ವತ್ತುಗಳನ್ನು ನಗದಾಗಿ ಪರಿವರ್ತಿಸಲು ಮತ್ತು ಜಪ್ತಿ ಮಾಡಲಾದ ಸ್ವತ್ತಿನ ನಗದು ಪರಿವರ್ತನೆಯಿಂದ ಬಂದ ಹಣವನ್ನು ಠೇವಣಿದಾರರಿಗೆ ಸಮನಾಗಿ ಹಂಚುವುದಕ್ಕೆ ಅವಶ್ಯಕವಾಗಬಹುದಾದಂಥ ನಿರ್ದೇಶನವನ್ನು ನೀಡತಕ್ಕದ್ದು.

(5) ಮೇಲೆ ಹೇಳಿದಂತೆ ಕಾರಣವನ್ನು ತೋರಿಸಿದರೆ ಅಥವಾ ಯಾವುದೇ ಆಕ್ಷೇಪಣೆಯನ್ನು ಮಾಡಿದರೆ, ವಿಶೇಷ ನ್ಯಾಯಾಲಯವು ಅವುಗಳ ತನಿಖೆ ಮಾಡಲು ಮುಂದುವರಿಯತಕ್ಕದ್ದು ಮತ್ತು ಹಾಗೆ ಮಾಡುವಾಗ ಪಕ್ಷಕಾರರನ್ನು ವಿಚಾರಣೆ ಮಾಡುವುದಕ್ಕೆ ಪರೀಕ್ಷಿಸುವುದಕ್ಕೆ ಮತ್ತು ಇತರ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ, ವಿಶೇಷ ನ್ಯಾಯಾಲಯವು ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 37ರ ಅಡಿಯಲ್ಲಿ ವಿವರಿಸಿದ ಸಂಕ್ಷಿಪ್ತ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು ಮತ್ತು ಸದರಿ ಸಂಹಿತೆಯ ಅಡಿಯಲ್ಲಿ ಮೊಕದ್ದಮೆಯ ವಿಚಾರಣೆ ನಡೆಸುವಾಗ ಒಂದು ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಜಪ್ತಿ ಮಾಡಿದ ಸ್ವತ್ತಿನಲ್ಲಿ, ಆಕ್ಷೇಪಣೆಯನ್ನು ಮಾಡುವ ಯಾವೊಬ್ಬ ವ್ಯಕ್ತಿಯು ಜಪ್ತಿ ದಿನಾಂಕದಂದು ತಾನು ಹಿತಾಸಕ್ತಿಯನ್ನು ಹೊಂದಿದ್ದನೆಂಬುದನ್ನು ತೋರಿಸುವುದಕ್ಕೆ ಸಾಕ್ಷವನ್ನು ಒದಗಿಸುವಂತೆ ಅಗತ್ಯಪಡಿಸತಕ್ಕದ್ದು.

(6) (5)ನೇ ಉಪ ಪ್ರಕರಣದ ಮೇರೆಗಿನ ತನಿಖೆಯ ತರುವಾಯ, ವಿಶೇಷ ನ್ಯಾಯಾಲಯವು, ಜಪ್ತಿಯ ತಾತ್ಕಾಲಿಕ ಆದೇಶವನ್ನು ನಿರುಪಾಧಿಕ ಮಾಡುವ ಅಥವಾ ಸ್ವತ್ತಿನ ಒಂದು ಭಾಗವನ್ನು ಜಪ್ತಿಯಿಂದ ಬಿಡುಗಡೆ ಮಾಡುವ ಮೂಲಕ ಅದನ್ನು ಮಾರ್ಪಡಿಸುವ ಅಥವಾ ಜಪ್ತಿಯ ತಾತ್ಕಾಲಿಕ ಆದೇಶವನ್ನು ರದ್ದುಪಡಿಸುವ ಆದೇಶವನ್ನು ಆದಷ್ಟು ಬೇಗನೇ (1)ನೇ ಉಪಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ವರ್ಷದೊಳಗೆ ಹೊರಡಿಸತಕ್ಕದ್ದು:

ಪರಂತು, ವಿಶೇಷ ನ್ಯಾಯಾಲಯವು, ಅಂಥ ಹಣಕಾಸು ಸಂಸ್ಥೆಯ ಠೇವಣಿದಾರರಿಗೆ ಮರುಸಂದಾಯ ಮಾಡುವುದಕ್ಕೆ ಅಗತ್ಯವಾದ ಮೌಲ್ಯಕ್ಕಿಂತ ಕಡಿಮೆ ಇಲ್ಲದಷ್ಟು ಮೌಲ್ಯದ ಸ್ವತ್ತು ಅಥವಾ ಮೊಬಲಗು ಜಪ್ತಿ

ಮಾಡಿದುದರಲ್ಲಿ ಉಳಿಯುತ್ತದೆ ಎಂದು ತನಗೆ ಮನವರಿಕೆಯಾದ ಹೊರತು, ಹಣಕಾಸು ಸಂಸ್ಥೆ ಅಥವಾ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ವ್ಯಕ್ತಿಯು ಸ್ವತ್ತಿನಲ್ಲಿ ಹೊಂದಿದ್ದಾರೆ ಎಂದು ಮನಗಂಡ ಯಾವುದೇ ಹಿತಾಸಕ್ತಿಯನ್ನು ಜಪ್ತಿಯಿಂದ ಬಿಡುಗಡೆ ಮಾಡತಕ್ಕದ್ದಲ್ಲ.

COURT BOOK
EMPOWERING LEGAL CLARITY

(7) (6)ನೇ ಉಪಪ್ರಕರಣದ ಅಡಿಯಲ್ಲಿ ವಿಶೇಷ ನ್ಯಾಯಾಲಯವು ಜಪ್ತಿ ಆದೇಶವನ್ನು ನಿರುಪಾಧಿಕಗೊಳಿಸುವ ಅಥವಾ ಸ್ವತ್ತಿನ ಒಂದು ಭಾಗವನ್ನು ಜಪ್ತಿಯಿಂದ ಬಿಡುಗಡೆ ಮಾಡುವ ಮೂಲಕ ಜಪ್ತಿ ಆದೇಶವನ್ನು ವ್ಯತ್ಯಾಸ ಮಾಡುವ ಒಂದು ಆದೇಶವನ್ನು ನೀಡಿರುವಲ್ಲಿ, ಅದು ಜಪ್ತಿ ಮಾಡಲಾದ ಸ್ವತ್ತುಗಳನ್ನು ನಗದಾಗಿ ಪರಿವರ್ತಿಸುವುದಕ್ಕಾಗಿ ಮತ್ತು ಹಾಗೆ ಜಪ್ತು ಮಾಡಲಾದ ಸ್ವತ್ತಿನ ನಗದು ಪರಿವರ್ತನೆಯಿಂದ ಬಂದ ಹಣವನ್ನು ಠೇವಣಿದಾರರಲ್ಲಿ ಸಮನಾಗಿ ಹಂಚುವುದಕ್ಕಾಗಿ ತಾನು ಅವಶ್ಯವೆಂದು ಭಾವಿಸಬಹುದಾದ ಆದೇಶವನ್ನು ನೀಡಬಹುದು.

(8) ಇಂತಹುದೇ ಅಧಿನಿಯಮಿತಿಯ ಅಡಿಯಲ್ಲಿ ಇತರೆ ಯಾವುದೇ ರಾಜ್ಯ ಸರ್ಕಾರವು, ಆ ರಾಜ್ಯ ಸರ್ಕಾರವು ಜಪ್ತಿ ಮಾಡಿದ ಯಾವುದೇ ಹಣ ಅಥವಾ ಸ್ವತ್ತು ಅಥವಾ ಆಸ್ತಿಗಳ ಮೇಲೆ ನಿಯಂತ್ರಣ ಚಲಾಯಿಸಲು ಅಧಿಕಾರ ನೀಡಿ ವಿಧ್ಯುಕ್ತವಾಗಿ ಪ್ರಾಧಿಕೃತಗೊಳಿಸಿರುವ ಅಥವಾ ರಚಿಸಿರುವ ಅಥವಾ ನಿರ್ದಿಷ್ಟಪಡಿಸಿರುವ ಯಾರೇ ವ್ಯಕ್ತಿಯು ಒಂದು ಅರ್ಜಿಯನ್ನು ಸಲ್ಲಿಸಿದಲ್ಲಿ, ವಿಶೇಷ ನ್ಯಾಯಾಲಯವು ಅಂಥ ಅರ್ಜಿಯನ್ನು ಈ ಅಧಿನಿಯಮದ ಅಡಿಸಲ್ಲಿಸಿದ್ದರೆ ಹೇಗೋ ಹಾಗೆ ತನ್ನಲ್ಲಿನ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಆ ಅಧಿನಿಯಮಿತಿಯ ಉಪಬಂಧಗಳನ್ನು ಜಾರಿಗೆ ತರುವುದಕ್ಕಾಗಿ ಅಂಥ ಅರ್ಜಿಯ ಮೇಲೆ ಸೂಕ್ತ ಆದೇಶ ಅಥವಾ ನಿರ್ದೇಶನವನ್ನು ನೀಡತಕ್ಕದ್ದು.

**13. ದುರ್ಭಾವನೆಯಿಂದ ಮಾಡಿದ ವರ್ಗಾವಣೆವನ್ನು ಪಡೆದವನ ಸ್ವತ್ತಿನ ಜಪ್ತಿ.-** (1) 3ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಒಂದು ಹಣಕಾಸು ಸಂಸ್ಥೆ ಅಥವಾ ಇತರ ವ್ಯಕ್ತಿಗೆ ಸೇರಿರುವ, ಜಪ್ತಿಗಾಗಿ ಲಭ್ಯವಿರುವ ಆಸ್ತಿಗಳು ಆ ಹಣಕಾಸು ಸಂಸ್ಥೆಯು ಠೇವಣಿದಾರರಿಗೆ ಮರು ಸಂದಾಯ ಮಾಡಬೇಕಾಗಿರುವ ಮೊಬಲಗು ಅಥವಾ ಮೌಲ್ಯಕ್ಕಿಂತ ಕಡಿಮೆ ಇವೆ ಎಂದು ಕಂಡುಬಂದರೆ ಮತ್ತು ಸದರಿ ಹಣಕಾಸು ಸಂಸ್ಥೆಯು ಯಾವುದೇ ಸ್ವತ್ತನ್ನು ಸದ್ಭಾವನೆಯಿಂದಲ್ಲದೆ ಬೇರೆ ರೀತಿಯಲ್ಲಿ ಮತ್ತು ಸೂಕ್ತ ಪ್ರತಿಫಲಕ್ಕಾಗಿ ಅಲ್ಲದೆ ವರ್ಗಾವಣೆ ಮಾಡಿದೆಯೆಂದು (ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅಥವಾ ನಂತರ) ನಂಬಲು ಯುಕ್ತ ಕಾರಣಗಳಿದ್ದವು ಎಂದು ಅಫಿದಾವಿತ್ತಿನ ಮೂಲಕ ಅಥವಾ ಅನ್ಯಥಾ ವಿಶೇಷ ನ್ಯಾಯಾಲಯಕ್ಕೆ ಮನವರಿಕೆಯಾದರೆ, ವಿಶೇಷ ನ್ಯಾಯಾಲಯವು, ಅಂಥ ಸ್ವತ್ತಿನ ವರ್ಗಾವಣೆ ಪಡೆದ ಯಾವೊಬ್ಬ ವ್ಯಕ್ತಿಯನ್ನು (ಅವನು ಸ್ವತ್ತನ್ನು ಸದರಿ ಹಣಕಾಸು ಸಂಸ್ಥೆಯಿಂದ ನೇರವಾಗಿ ಪಡೆದಿರಲಿ ಅಥವಾ ಇಲ್ಲದಿರಲಿ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಲಾಗುವ ದಿನಾಂಕದಂದು ಹಾಜರಾಗುವಂತೆ ಮತ್ತು ವರ್ಗಾವಣೆಯಾದ ಸ್ವತ್ತಿನ ಯುಕ್ತ ಮೌಲ್ಯಕ್ಕೆ ಸಮಾನವಾಗುವಷ್ಟು ಪ್ರಮಾಣದಲ್ಲಿ ವರ್ಗಾವಣೆ ಪಡೆದ ವ್ಯಕ್ತಿಯ ಸ್ವತ್ತನ್ನು ಏಕೆ ಜಪ್ತಿ ಮಾಡಕೂಡದು ಎಂಬುದಕ್ಕೆ ಕಾರಣ ತೋರಿಸುವಂತೆ ನೋಟೀಸು ಮೂಲಕ ಅಗತ್ಯಪಡಿಸಬಹುದು.

(2) ಸದರಿ ವರ್ಗಾವಣೆ ಪಡೆದ ವ್ಯಕ್ತಿಯು, ನಿರ್ದಿಷ್ಟಪಡಿಸಿದ ದಿನಾಂಕದಂದು ಹಾಜರಾಗದಿದ್ದಲ್ಲಿ ಮತ್ತು ಕಾರಣಗಳನ್ನು ತೋರಿಸದಿದ್ದಲ್ಲಿ ಅಥವಾ 12ನೇ ಪ್ರಕರಣದ (5)ನೇ ಉಪ ಪ್ರಕರಣದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ತನಿಖೆ ನಡೆಸಿದ ತರುವಾಯ, ಸದರಿ ವರ್ಗಾವಣೆ ಪಡೆದ ವ್ಯಕ್ತಿಗೆ ಮಾಡಿದ ಸ್ವತ್ತಿನ ವರ್ಗಾವಣೆಯು, ಸದ್ಭಾವನೆಯಿಂದ ಮಾಡಿದ್ದಲ್ಲವೆಂದು ಅಥವಾ ಸೂಕ್ತ ಪ್ರತಿಫಲಕ್ಕಾಗಿ ಮಾಡಿದ್ದಲ್ಲವೆಂದು ವಿಶೇಷ ನ್ಯಾಯಾಲಯಕ್ಕೆ ಮನವರಿಕೆಯಾದರೆ, ವರ್ಗಾವಣೆಯಾದ ಸ್ವತ್ತಿನ ಯುಕ್ತ ಮೌಲ್ಯಕ್ಕೆ ಸಮನಾದುದೆಂದು ವಿಶೇಷ ನ್ಯಾಯಾಲಯವು ಅಭಿಪ್ರಾಯಪಡುವ ಪ್ರಮಾಣದಲ್ಲಿ ಸದರಿ ವರ್ಗಾವಣೆ ಪಡೆದ ವ್ಯಕ್ತಿಯ ಸ್ವತ್ತಿನ ಜಪ್ತಿಗೆ ಆದೇಶ ನೀಡತಕ್ಕದ್ದು.

**14. ಜಪ್ತಿಗೆ ಬದಲಾಗಿ ಭದ್ರತೆ.-** ಈ ಅಧಿನಿಯಮದ ಮೇರೆಗೆ ಯಾವುದೇ ಹಣಕಾಸು ಸಂಸ್ಥೆಯ ಅಥವಾ ವ್ಯಕ್ತಿಯ ಸ್ವತ್ತು ಜಪ್ತಿಯಾಗಿದ್ದರೆ ಅಥವಾ ಜಪ್ತಿಯಾಗುವುದರಲ್ಲಿದ್ದರೆ, ಅದು ಅಥವಾ ಅವನು ಯಾವುದೇ ಸಮಯದಲ್ಲಿ ಅಂಥ ಜಪ್ತಿಗೆ ಬದಲಾಗಿ ಭದ್ರತೆ ನೀಡಲು ಅನುಮತಿ ಕೋರಿ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು ಮತ್ತು ನೀಡಲು ಒಪ್ಪಿಕೊಂಡ ಮತ್ತು ನೀಡಲಾದ ಭದ್ರತೆಯು ತೃಪ್ತಿಕರವಾಗಿದೆ ಮತ್ತು ಸಾಕಷ್ಟು ಇದೆ ಎಂದು ವಿಶೇಷ ನ್ಯಾಯಾಲಯವು ಅಭಿಪ್ರಾಯಪಟ್ಟರೆ ಅದು ಸಂದರ್ಭಾನುಸಾರ ಜಪ್ತಿಯ ತಾತ್ಕಾಲಿಕ ಆದೇಶವನ್ನು ರದ್ದುಗೊಳಿಸಬಹುದು ಅಥವಾ ಜಪ್ತಿ ಆದೇಶವನ್ನು ಹೊರಡಿಸದೆ ಇರಬಹುದು.

**15. ಜಪ್ತಿ ಮಾಡಿದ ಸ್ವತ್ತಿನ ನಿರ್ವಹಣೆ.-** ವಿಶೇಷ ನ್ಯಾಯಾಲಯವು, ಈ ಅಧಿನಿಯಮದ ಮೇರೆಗೆ ಜಪ್ತಿ ಮಾಡಲಾದ ಮತ್ತು ಸಕ್ಷಮ ಪ್ರಾಧಿಕಾರಿಯಲ್ಲಿ ನಿಹಿತವಾದ ಯಾವುದೇ ಸ್ವತ್ತಿನಲ್ಲಿ ಹಿತಾಸಕ್ತಿ ಹೊಂದಿರುವ ಯಾವೊಬ್ಬ

ವ್ಯಕ್ತಿಯು ಸಲ್ಲಿಸಿದ್ದ ಅರ್ಜಿಯ ಸಂಬಂಧದಲ್ಲಿ ಮತ್ತು ಸಕ್ಷಮ ಪ್ರಾಧಿಕಾರಕ್ಕೆ ಅಹವಾಲನ್ನು ಹೇಳಲು ಯುಕ್ತ ಅವಕಾಶ ನೀಡಿದ ತರುವಾಯ,

COURT BOOK
EMPOWERING LEGAL CLARITY

(ಎ) ಅರ್ಜಿದಾರನ ಮತ್ತು ಅವನ ಕುಟುಂಬದ ನಿರ್ವಹಣೆಗಾಗಿ ಮತ್ತು ಅವನ ವಿರುದ್ಧ ವಿಶೇಷ ನ್ಯಾಯಾಲಯದಲ್ಲಿ ಕ್ರಿಮಿನಲ್ ವ್ಯವಹರಣೆ ಹೂಡಲಾಗಿದ್ದರೆ, ಅರ್ಜಿದಾರನ ಪ್ರತಿರಕ್ಷಣೆಗೆ ಸಂಬಂಧಪಟ್ಟ ವೆಚ್ಚಗಳಿಗಾಗಿ ಯುಕ್ತವಾಗಿ ಅಗತ್ಯವಿರಬಹುದಾದಂಥ ಮೊಬಲಗುಗಳನ್ನು ಅರ್ಜಿದಾರನು ಹಿತಾಸಕ್ತಿಯನ್ನು ಕ್ಲೇಮು ಮಾಡಿರುವಂಥ ಜಪ್ತಿ ಮಾಡಲಾದ ಮತ್ತು ಸಕ್ಷಮ ಪ್ರಾಧಿಕಾರದಲ್ಲಿ ನಿಹಿತವಾದಂಥ ಸ್ವತ್ತಿನಿಂದ ಒದಗಿಸಲು;

(ಬಿ) ಜಪ್ತಿಯಿಂದ ಬಾಧಿತವಾದ ಯಾವುದೇ ವ್ಯವಹಾರದ ಹಿತಾಸಕ್ತಿಯನ್ನು ಮತ್ತು ವಿಶೇಷವಾಗಿ, ಅಂಥ ವ್ಯವಹಾರದಲ್ಲಿ ಯಾರೇ ಪಾಲುದಾರರ ಹಿತಾಸಕ್ತಿಯನ್ನು ಸಾಧ್ಯವಾಗಬಹುದಾದ ಮಟ್ಟಿಗೆ ಕಾಪಾಡಿಕೊಂಡು ಬರಲು,

(ಸಿ) ಹಾಗೆ ಜಪ್ತಿ ಮಾಡಲಾದ ಸ್ವತ್ತಿನ ಪೈಕಿಯಿಂದ ವಿಶೇಷ ನ್ಯಾಯಾಲಯದ ಮುಂದಿರುವ ನಡೆವಳಿಯಿಂದ ಉಂಟಾಗಿ ಹಣಕಾಸು ಸಂಸ್ಥೆಗೆ ಅಥವಾ ವ್ಯಕ್ತಿಗೆ ಪ್ರಾಪ್ತವಾಗುವ ಶಾಸನಬದ್ಧವಾಗಿರುವ ಅಥವಾ ಅನ್ಯಥಾ, ಯಾವುದೇ ದಾಯಿತ್ವವನ್ನು ನಿಯಮಿಸಲಾದ ರೀತಿಯಲ್ಲಿ ವಿಮೋಚನೆಗೊಳಿಸಲು,

- ವಿಶೇಷ ನ್ಯಾಯಾಲಯವು ನ್ಯಾಯಸಮ್ಮತ ಹಾಗೂ ಸೂಕ್ತವೆಂದು ಪರಿಗಣಿಸುವಂಥ ಆದೇಶಗಳನ್ನು ಮಾಡಬಹುದು.

**16. ಅಪೀಲು.-** ಸಕ್ಷಮ ಪ್ರಾಧಿಕಾರಿಯೂ ಒಳಗೊಂಡಂತೆ ಯಾವೊಬ್ಬ ವ್ಯಕ್ತಿಯು, ವಿಶೇಷ ನ್ಯಾಯಾಲಯದ ಅದೇಶದಿಂದ ಬಾಧಿತನಾಗಿದ್ದರೆ, ಆದೇಶದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು.

**17. ವಿಶೇಷ ಸರ್ಕಾರಿ ಅಭಿಯೋಜಕ.-** ಸರ್ಕಾರವು, ಅಧಿಸೂಚನೆಯ ಮೂಲಕ, ವಿಶೇಷ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ನಡೆಸುವ ಉದ್ದೇಶಕ್ಕಾಗಿ ಹದಿನೈದು ವರ್ಷಗಳಿಗೆ ಕಡಿಮೆ ಇಲ್ಲದಂತೆ ಅನುಭವ ಹೊಂದಿದ ನ್ಯಾಯವಾದಿಯನ್ನು ವಿಶೇಷ ಸರ್ಕಾರಿ ಅಭಿಯೋಜಕನನ್ನಾಗಿ ನೇಮಕ ಮಾಡತಕ್ಕದ್ದು.

**18. ಅಪರಾಧಗಳಿಗೆ ಸಂಬಂಧಪಟ್ಟಂತೆ ವಿಶೇಷ ನ್ಯಾಯಾಲಯದ ಕಾರ್ಯವಿಧಾನ ಮತ್ತು ಅಧಿಕಾರಗಳು.-** (1) ವಿಚಾರಣೆಗಾಗಿ ಆಪಾದಿತನನ್ನು ತನಗೆ ಒಪ್ಪಿಸದೆ ಇದ್ದಾಗ್ಯೂ ವಿಶೇಷ ನ್ಯಾಯಾಲಯವು ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳಬಹುದು ಮತ್ತು ಆಪಾದಿತ ವ್ಯಕ್ತಿಯ ವಿಚಾರಣೆ ನಡೆಸುವಾಗ ಅದು ದಂಡ ಪ್ರಕ್ರಿಯಾ ಸಂಹಿತೆ 1973ರಲ್ಲಿ (1974ರ ಕೇಂದ್ರ ಅಧಿನಿಯಮ ೩೩) ಮ್ಯಾಜಿಸ್ಟ್ರೇಟರಿಂದ ವಾರೆಂಟು ಮೊದಕ್ದಮೆಗಳ ವಿಚಾರಣೆಗಾಗಿ ನಿರ್ದಿಷ್ಟಪಡಿಸಿದ ಕಾರ್ಯ ವಿಧಾನವನ್ನು ಅನುಸರಿಸತಕ್ಕದ್ದು.

(2) ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ ೩೩) 438ನೇ ಪ್ರಕರಣದ ಉಪಬಂಧಗಳನ್ನು ಹೊರತುಪಡಿಸಿ ಸದರಿ ಸಂಹಿತೆಯ ಉಪಬಂಧಗಳು ವಿಶೇಷ ನ್ಯಾಯಾಲಯದ ಮುಂದಿನ ವ್ಯವಹರಣೆಗಳಿಗೆ ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ ಅನ್ವಯವಾಗತಕ್ಕದ್ದು ಮತ್ತು ಸದರಿ ಉಪಬಂಧಗಳ ಉದ್ದೇಶಗಳಿಗಾಗಿ, ವಿಶೇಷ ನ್ಯಾಯಾಲಯವನ್ನು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರ ಅಥವಾ ಸಂದರ್ಭಾನುಸಾರ ಮಹಾನಗರ ಮ್ಯಾಜಿಸ್ಟ್ರೇಟರ ನ್ಯಾಯಾಲಯ ಎಂಬುದಾಗಿ ಭಾವಿಸತಕ್ಕದ್ದು.

## ಅಧ್ಯಾಯ - V

**19. ಅಧಿನಿಯಮವು ಇತರ ಕಾನೂನುಗಳಿಗಿಂತ ಹೆಚ್ಚು ಪ್ರಭಾವವುಳ್ಳದ್ದಾಗಿರುವುದು.-** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನು ಹೊರತುಪಡಿಸಿ ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನಿನಲ್ಲಿ ಅಥವಾ ಯಾವುದೇ ಅಂಥ ಕಾನೂನಿನ ಬಲದಿಂದ ಪರಿಣಾಮ ಹೊಂದಿರುವ ಯಾವುದೇ ರೂಢಿ ಅಥವಾ ಆಚರಣೆ ಅಥವಾ ಯಾವುದೇ ಲಿಖಿತದಲ್ಲಿ ಅದಕ್ಕೆ ಅಸಂಗತವಾದುದು ಏನೇ ಅಡಕವಾಗಿದ್ದಾಗ್ಯೂ ಪರಿಣಾಮವುಳ್ಳದ್ದಾಗಿರತಕ್ಕದ್ದು.

**20. ಸದ್ಭಾವನೆಯಿಂದ ಕೈಕೊಂಡ ಕ್ರಮದ ರಕ್ಷಣೆ.-** ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಸಂಬಂಧದಲ್ಲಿ, ಸರ್ಕಾರದ ಅಥವಾ ಸಕ್ಷಮ ಪ್ರಾಧಿಕಾರದ

ಅಥವಾ ಸರ್ಕಾರದ ಒಬ್ಬ ಅಧಿಕಾರಿಯ ಅಥವಾ ನೌಕರನ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆ ನಡೆಸಲು ಅವಕಾಶವಿರತಕ್ಕದ್ದಲ್ಲ.

COURT BOOK
EMPOWERING LEGAL CLARITY

**21. ನಿಯಮಗಳ ರಚನಾಧಿಕಾರ.–** (1) ಸರ್ಕಾರವು ಅಧಿಸೂಚನೆಯ ಮೂಲಕ ಪೂರ್ವ ಪ್ರಕಟಣೆಯ ತರುವಾಯ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸಲು ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಿರಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಹಾಗೆ ಮಂಡಿಸಲಾದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ಮಾಡಬಾರದೆಂದು ತೀರ್ಮಾನಿಸಿದರೆ ತದನಂತರ ಆ ನಿಯಮವು ಆ ನಿಯಮದ ಅಡಿಯಲ್ಲಿ ಈ ಮುಂಚೆ ಮಾಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗದಂತೆ ಸಂದರ್ಭಾನುಸಾರ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಹಾಗಿದ್ದರೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ಧತಿಯು ಆ ನಿಯಮದ ಅಡಿಯಲ್ಲಿ ಈ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆ ಉಂಟು ಮಾಡತಕ್ಕದ್ದಲ್ಲ.

**22. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಸರ್ಕಾರವು, ಸಂದರ್ಭಕ್ಕನುಸಾರವಾಗಿ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ, ತೊಂದರೆಗಳನ್ನು ನಿವಾರಿಸಲು ಅವಶ್ಯವೆಂದು ತನಗೆ ಕಂಡುಬಂದಂಥ ಏನನ್ನಾದರೂ ಆದೇಶದ ಮೂಲಕ ಮಾಡಬಹುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.

**ಕರ್ನಾಟಕ ಸರ್ಕಾರ**

**ಸಂಖ್ಯೆ:** ಆಇ 44 ಟಿಎಆರ್ 2006

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 17.05.2006.

COURT BOOK
EMPOWERING LEGAL CLARITY

**<u>ಅಧಿಸೂಚನೆ</u>**

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ಅಧಿನಿಯಮ, 2004ರ (2005ರ ಕರ್ನಾಟಕ ಅಧಿನಿಯಮ ಸಂಖ್ಯೆ 30) 1ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಸದರಿ ಅಧಿನಿಯಮದ ಎಲ್ಲಾ ಉಪಬಂಧಗಳು ದಿನಾಂಕ:17ನೇ ಮೇ 2006 ರಂದು ಜಾರಿಗೆ ಬರತಕ್ಕದ್ದೆಂದು ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

(ಸಿ. **ಶಾಮ್‌ರಾವ್**)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಎಫ್‌ಆರ್ ಮತ್ತು ಬಿಸಿಸಿ)